ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ -19

5ನೇ ವರ್ಷ 16ನೇ ಸಂಚಿಕೆ ಕೊಪ್ಪ 28-12-1986 ಭಾನುವಾರ ಬೆಲೆ 40 ಪೈಸೆ

ಜನತಾ—ಕಾಂಗ್ರೆಸ್ ಸಮಬಲ ಹೋರಾಟ

ಶೃಂಗೇರಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಜಿಲ್ಲಾ ಪರಿಷತ್ತಿನ ಆರೂ ಸ್ಥಾನಗಳಿಗೆ ಜನತಾ ಮತ್ತು ಕಾಂಗ್ರೆಸ್ ಪಕ್ಷಗಳು ಸಮಬಲದ ಸೆಣಸಾಟ ನಡೆಸಿವೆ.

(“ಚುನಾವಣಾ ಸಮೀಕ್ಷೆ” 2ನೇ ಪುಟದಿಂದ ಆರಂಭವಾಗುತ್ತದೆ. ಸ್ಥಳಾಭಾವದಿಂದ ಅದರ ಕಡೇ ಭಾಗವನ್ನು ಇಲ್ಲಿ ಮುದ್ರಿಸಿದೆ. —ಸಂ.)

ಹರಿಹರಪುರ

ಮಹಿಳಾ ಮೀಸಲು ಕ್ಷೇತ್ರವಾದ ಇದು ಜನತಾ ಪಕ್ಷದ ಒಂದು ಅತಿ ಪ್ರಮುಖ ಪ್ರತಿಷ್ಠೆಯ ಕ್ಷೇತ್ರವೂ ಹೌದು. ಇಲ್ಲಿನ ಜನತಾ ಅಭ್ಯರ್ಥಿ ಶ್ರೀಮತಿ ಜಯಲಕ್ಷ್ಮಿ ವಾಸಪ್ಪ ಮಾಜಿ ತಾ|| ಜನತಾ ಅಧ್ಯಕ್ಷರ ಪತ್ನಿಯಾಗಿರುವುದಲ್ಲದೆ, ಅಸಗೋಡು ಪಂಚಾಯ್ತಿಗೆ, ಅಲ್ಲಿನ ಮಹಿಳಾ ಸಮಾಜಕ್ಕೆ ಅಧ್ಯಕ್ಷೆಯಾಗಿದ್ದು, ತಾಲ್ಲೂಕಿನ ಮಹಿಳಾ ಚಟುವಟಿಕೆಗಳಲ್ಲೂ ಅತಿ ಪ್ರಮುಖ ಪಾತ್ರ ವಹಿಸುತ್ತಿದ್ದು ಸ್ವಂತವಾಗಿ ಒಳ್ಳೆಯ ವರ್ಚಸ್ಸುಳ್ಳವರಾಗಿರುವುದು ಇದಕ್ಕೆ ಕಾರಣ. ಇಲ್ಲಿ ಅವರ ನೇರ ಪ್ರತಿಸ್ಪರ್ಧಿಯಾದ ಕಾಂಗ್ರೆಸ್‌ನ ಎಚ್.ಎಸ್. ಸುಮಿತ್ರಮ್ಮ ಕೊಪ್ಪ ತಾ. ಅ. ಮಂಡಳಿಯ ಮಾಜಿ ಉಪಾಧ್ಯಕ್ಷೆ ಹಾಗೂ ಕಾಂಗ್ರೆಸ್ ಪಕ್ಷದ ವಿವಿಧ ವೇದಿಕೆಗಳಲ್ಲಿದ್ದವರು.

ಸಾಮರ್ಥ್ಯ, ಅರ್ಹತೆಗಳ ಪ್ರಶ್ನೆ

ಅಭ್ಯರ್ಥಿಯ ಸಾಮರ್ಥ್ಯ, ಅರ್ಹತೆ, ಪರಿಶುದ್ಧತೆಗಳನ್ನೇ ಪರಿಗಣಿಸಿ ಚುನಾಯಿಸುವುದಾದರೆ ಇಲ್ಲಿ ಜಯಲಕ್ಷ್ಮಿಯವರ ಗೆಲುವು ಲೀಲಾಜಾಲ. ಆದರೆ ಹಾಗಾಗುವುದಿಲ್ಲವಲ್ಲ. ಪಕ್ಷದ ದೃಷ್ಟಿಕೋಣವೂ ಬರುತ್ತಲ್ಲ. ಬಿಲಗದ್ದೆ, ಹಾಲ್ಮುತ್ತೂರು, ಕಮ್ಮರಡಿ ಮುಂತಾದುವು ಜನತಾಕ್ಕೆ ಹೆಚ್ಚು ಆಶಾದಾಯಕವಾಗಿದ್ದರೆ, ಬಂಡಿಗಡಿ, ಶಾನುವಳ್ಳಿ ನಿಲುವಾಗಿಲು, ಕೆಸವೆ ಮುಂತಾದವು ಕಾಂಗ್ರೆಸ್ ಭದ್ರಕೋಟೆಗಳೆನ್ನಲಾಗುತ್ತಿದೆ. ಹರಿಹರಪುರ, ಹೊಸಕೊಪ್ಪ ಕಡೆ ಮಿಶ್ರ 'ಹವೆ'ಯಿದೆ

ಆದರೂ ಶ್ರೀಮತಿ ಜಯಲಕ್ಷ್ಮಿ ಸ್ವತಂತ್ರವಾಗಿಯೇ ದಕ್ಷವಾಗಿ ಮತ್ತು ಪಟ್ಟು ಹಿಡಿದು ಕೆಲಸ ನಿರ್ವಹಿಸ ಬಲ್ಲವರು, ಕೈ ಶುದ್ಧಿಯುಳ್ಳವರು ಹಾಗೂ ನೇರ ನಡೆ-ನುಡಿಯವರು ಎಂಬುದು ಈ ಹೋಬಳಿಯಲ್ಲಿ ಸಾಕಷ್ಟು ವ್ಯಾಪಕವಾಗಿರುವ ಅಭಿಪ್ರಾಯ ಆದರೆ ಸ್ವತಃ ಇವರ ಪತಿ ವಾಸಪ್ಪನವರ ಅತಿರೇಕದ 'ಹೋರಾಟ'ಗಳು, ಈಚೆಗೆ ಅವರು ಶಂಕರ್ ಕಂಪೆನಿ ಕಾರ್ಮಿಕರ ಬೆನ್ನಿಗೆ ಚೂರಿ ಇರಿದು, ಮಾಲೀಕರೊಂದಿಗೆ ನಡೆಸುತ್ತಿರುವ ಚಮಚಾಗಿರಿ ಮುಂತಾದುವು ಇವರಿಗೆ ಸ್ವಲ್ಪ ತೊಂದರೆ ಕೊಡಬಹುದು. (ಈ ಅಂಶ ಕೊಪ್ಪದಲ್ಲೂ ಜನತಾಕ್ಕೆ ಪ್ರತಿಕೂಲವಾಗಲಿದೆ.) ಜೊತೆಗೆ, ಈಚೆಗೆ ಕೆಲ ಹತಾಶ ಶಕ್ತಿಗಳು ಜಯಲಕ್ಷ್ಮಿಯವರ ವ್ಯಕ್ತಿಗತ ಚಾರಿತ್ರ್ಯ ವಧೆಯನ್ನೂ ನಡೆಸಿವೆಯೆಂಬ ಸುದ್ದಿಯಿದೆ.

ಈ ಕೆಲವು ಅಂಶಗಳು ಹಾಗೂ ಕಾಂಗ್ರೆಸ್‌ನ ಭದ್ರಕೋಟೆಗಳು ಸುಮಿತ್ರಮ್ಮನವರ ನೆರವಿಗೆ ಸಾಕಾದರೆ ಮಾತ್ರ ಅವರು ಗೆಲ್ಲಬಹುದೇ ಹೊರತು ಕೆಲಸಗಾರಿಕೆಯಲ್ಲಿ ಅವರು ಜಯಲಕ್ಷ್ಮಿಯವರಿಗೆ ಯಾವ ರೀತಿಯಲ್ಲೂ ಸಾಟಿಯಲ್ಲ ಎಂಬುದು ಬಲ್ಲವರ ಅನಿಸಿಕೆ. ಇಲ್ಲಿ 8393 ಮಹಿಳೆಯರು, 8515 ಪುರುಷರು —ಒಟ್ಟು 16908 ಮತದಾರರಿದ್ದಾರೆ.

ನರಸಿಂಹರಾಜಪುರ

ಜನತಾ ಪಕ್ಷದ ಮತ್ತೊಂದು ಅತಿ ಪ್ರತಿಷ್ಠೆಯ ಕ್ಷೇತ್ರವಾದ ಇಲ್ಲಿ ಕಾಂಗ್ರೆಸ್-ಜನತಾ ಜೊತೆಗೆ ಸಿಪಿಐ ಸೇರಿ ತ್ರಿಕೋಣ ಸ್ಪರ್ಧೆ. ಜನತಾದ ಅಭ್ಯರ್ಥಿ, ಹಿರಿಯ ವಕೀಲ ಮಾಗ ಚಂದ್ರಶೇಖರ್ ಇಲ್ಲಿನ ಜನ ಜೀವನದಲ್ಲಿ ಹಾಸುಹೊಕ್ಕಾಗಿ ಬೆರೆತಿದ್ದು, ಪುರಸಭೆಯ ಅಧ್ಯಕ್ಷರಾಗಿ ಕಾಂಗ್ರೆಸ್ ಸದಸ್ಯರಿಂದ ಸಹ ಸರ್ವಾನುಮತದಿಂದ ಆರಿಸಲ್ಪಟ್ಟವರು. ಸೌಮ್ಯ ಸ್ವಭಾವ, ಪಕ್ಷ-ಜಾತಿ ಮುಂತಾಗಿ ಯಾವುದೇ ಭೇದವಿಲ್ಲದೆ ಸಾಮಾನ್ಯ ಜನರಿಗೆ ಸಾಕಷ್ಟು ಉಪಕಾರ ಮಾಡಿದವರು ಎಂಬ ಹೊಗಳಿಕೆಗಳು ಇವರ ಪಾಲಿಗೆ ಇವೆ.

ಮಲಯಾಳಿ ಪ್ರಶ್ನೆ

ಕಾಂಗ್ರೆಸ್ ಅಭ್ಯರ್ಥಿ, ಬೇಗಾನೆ ಕಾಲದ ಮಾಜಿ ಪುರಸಭಾಧ್ಯಕ್ಷ ಟಿ.ವಿ. ವರ್ಗೀಸ್ ಅಲಿಯಾಸ್ ರಾಜು ಮಲಯಾಳಿ-ಕ್ರೈಸ್ತರು. ಈ ಕ್ಷೇತ್ರದಲ್ಲಿರುವ ಒಟ್ಟು 16697 (ಮಹಿಳೆಯರು 8006, ಪುರುಷರು 8691) ಮತದಾರರ ಪೈಕಿ ಸುಮಾರು 6 ಸಾವಿರಕ್ಕೂ ಹೆಚ್ಚು ಮಂದಿ ಮಲಯಾಳಿಗಳು ಎಂಬ ಅಂಶವೇ ಪ್ರಧಾನವಾಗಿ ಇವರಿಗೆ ಟಿಕೆಟ್ ದಕ್ಕಲು ಕಾರಣ ಎನ್ನಲಾಗಿದೆ. ಅಲ್ಲವಾದರೆ ಗೂಂಡಾ ಪ್ರವೃತ್ತಿ, ಮಿತಿಯಿಲ್ಲದ ಕಳ್ಳ ಧಂಧೆಯ ಆರೋಪಗಳು ಇವರ ಮೇಲೆ ಕಾಂಗ್ರೆಸ್‌ನವರಿಂದಲೇ ವಿಪುಲವಾಗಿ ಕೇಳಿ ಬರುತ್ತಿವೆ. ಮಲಯಾಳಿಗಳಲ್ಲದ ಕಾಂಗ್ರೆಸ್‌ನವರೇ ಇವರ ಗೆಲುವನ್ನು ಇಷ್ಟಪಡುತ್ತಿಲ್ಲ ಎಂಬ ಗುಸು ಗುಸು ಕೂಡ ಇದೆ. ಅಲ್ಲದೆ ಬೇಕಾದಷ್ಟು ಜನ ಮಲಯಾಳಿಗಳು ಮಾಗ ಚಂದ್ರಶೇಖರ್‌ರಿಂದ ಒಂದಿಲ್ಲೊಂದು ರೀತಿ ಉಪಕಾರ ಪಡೆದಿದ್ದು, ಅವರಿಗೆ ಆ ವಿಭಾಗದ ಬೆಂಬಲ ಕೂಡ ಇದೆಯೆಂಬ ನಿರೀಕ್ಷೆಯೂ ಇದೆ.

ಸಿಪಿಐ ಜನಪ್ರಿಯತೆ

ಇತ್ತ ಸಿಪಿಐನ ಸೇವಿಯರ್ ಕೂಡ ಮಲಯಾಳಿ-ಕ್ರೈಸ್ತರು. ಮಾಜಿ ಯೋಧ, ವಿದ್ಯಾವಂತ, ಪುಕ್ಕಟೆಯಾಗಿ ಆಯುರ್ವೇದ ಔಷಧಿ ನೀಡುವವರು, ಬಡವರಿಗೆ-ಜನಸಾಮಾನ್ಯರಿಗೆ ಒಂದಿಲ್ಲೊಂದು ಬಗೆಯಲ್ಲಿ ನೆರವಾಗುತ್ತಿರುವವರು, ಒಟ್ಟಿನಲ್ಲಿ ಸಾಕಷ್ಟು ಜನಪ್ರಿಯತೆ ಇರುವ ವ್ಯಕ್ತಿ. ಜೊತೆಗೆ ಈ ತಾಲ್ಲೂಕಿನಲ್ಲಿ ಸಿಪಿಐ ಈಚೆಗಷ್ಟೇ ಆರಂಭವಾಗಿದ್ದರೂ, ಇಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿರುವ ಕೃಷಿ ಕಾರ್ಮಿಕರು, ಸಣ್ಣ ರೈತರು ಮತ್ತು ಬಗರ್‌ಹುಕುಂ ಸಾಗುವಳಿದಾರರು ಮುಂತಾದವರಿಗಾಗಿ ಒಳ್ಳೆಯ ಹೋರಾಟಗಳನ್ನು ನಡೆಸುತ್ತಿದೆ. ಅದೇ ರೀತಿ ಮುತ್ತಿನಕೊಪ್ಪ ಪ್ರದೇಶದಲ್ಲೂ ಸಾಕಷ್ಟು ಹೆಸರು, ಜನಪ್ರಿಯತೆ ಗಳಿಸುತ್ತಿದೆ. ಆದ್ದರಿಂದ, ಸೇವಿಯರ್ ಗೆಲ್ಲುವುದು ದೂರದ ಮಾತಾದರೂ, ಕಾಂಗ್ರೆಸ್‌ಗೆ ತೀವ್ರವಾದ ಆತಂಕವನ್ನಂತೂ ಒಡ್ಡಿದ್ದಾರೆನ್ನಲಾಗಿದೆ. ವಾಸ್ತವವಾಗಿ, ಅವರನ್ನು ಸ್ಪರ್ಧೆಯಿಂದ ಹಿಂತೆಗೆಸಲು ಕಾಂಗ್ರೆಸ್ ಬಹಳ ದುಬಾರಿ ಪ್ರಸ್ತಾಪ ಮಾಡಿ ಸಫಲವಾಗದೆ ಹೋಗಿದೆಯೆಂಬ ಸುದ್ದಿಯೂ ಇದೆ.

ಇಷ್ಟೆಲ್ಲ ಅಂಶಗಳಿಂದ ಜನತಾ ಅಭ್ಯರ್ಥಿಯ ಗೆಲುವು ಬಹುಮಟ್ಟಿಗೆ ಸಂಭವವೆನ್ನಿಸಿದರೂ, ಅರ್ಥವಾಗದ, ಆದರೆ ತಳ್ಳಿ ಹಾಕಲೂ ಆಗದ ಯಾವುದೋ ಲೆಕ್ಕಾಚಾರವೊಂದು ಇದಕ್ಕೆ ತದ್ವಿರುದ್ಧವಾದ ಚಿತ್ರಣವನ್ನು ನೀಡಿರುವುದೂ ಇದೆ.

ಬಾಳೆಹೊನ್ನೂರು

9062 ಪುರುಷ, 8671 ಮಹಿಳಾ ಮತದಾರರಿರುವ ಈ ಕ್ಷೇತ್ರ ಮಹಿಳೆಯರಿಗೆ ಮೀಸಲು. ಕಾಂಗ್ರೆಸ್ 'ಹುಲಿ' ಕೆ. ಟಿ. ಚಿನ್ನಯ್ಯ ಗೌಡರ ಮಗಳು, ಉನ್ನತ ವಿದ್ಯಾವಂತೆ ಬಿ.ಸಿ. ಗೀತಾ ಮತ್ತು ನ.ರಾ. ಪುರ ತಾ|| ಜನತಾ ಅಧ್ಯಕ್ಷ ಕೊಳಲೆ ರುದ್ರಪ್ಪನವರ ಸಹೋದರಿ ಕೆ. ಎನ್. ಶಾರದಮ್ಮ ಆಯಾ ಪಕ್ಷಗಳ ನೇರ ಪ್ರತಿಸ್ಪರ್ಧಿಗಳು.

ಬಾಳೆಹೊನ್ನೂರು ಹೋಬಳಿ ಕಾಂಗ್ರೆಸ್‌ನ, ಮುಖ್ಯವಾಗಿ ಚಿನ್ನಯ್ಯ ಗೌಡರ ದಟ್ಟ ಪ್ರಭಾವದ ವಲಯ. ಆದ್ದರಿಂದ ಇಲ್ಲಿ ಕಾಂಗ್ರೆಸ್ ಸಲೀಸಾಗಿ ಗೆಲ್ಲುತ್ತದೆ ಎಂಬ ಅಭಿಪ್ರಾಯ ವ್ಯಾಪಕವಾಗಿದೆ. ಆದರೆ ಹೆನ್ನಂಗಿ, ಮೇಗರಮಕ್ಕಿ, ಅಳೇಹಳ್ಳಿ, ಗಡಿಗೇಶ್ವರ ಮುಂತಾದ ಒಳ ಪ್ರದೇಶಗಳಲ್ಲಿ ಕಳೆದ ಸಲ ಜನತಾ ಅತಿ ಹೆಚ್ಚು ಮತ ಪಡೆದಿತ್ತು. ಅಲ್ಲದೆ ಈ ಕ್ಷೇತ್ರಕ್ಕೆ ಸೀತೂರು, ಮಲ್ಲಂದೂರು ಮುಂತಾದ, ಜನತಾ ಪ್ರಭಾವದವುಗಳೆನ್ನಲಾದ ಪ್ರದೇಶಗಳೂ ಸೇರಿರುವುದರಿಂದ ಜಯ ತಮ್ಮದೇ ಎಂಬುದು ಸ್ವತಃ ಗೋವಿಂದ ಗೌಡರ ವಿಶ್ವಾಸ. ಈ ಕ್ಷೇತ್ರಕ್ಕೆ ಸೇರಿದ ಭದ್ರಾ ಹಿನ್ನೀರಿನ ಪ್ರದೇಶಗಳಲ್ಲಿ ಸಹ, ಈವರೆಗೆ ಏನೂ ಅಭಿವೃದ್ಧಿಯಾಗದಿದ್ದ ಅಲ್ಲೆಲ್ಲ ತಾನು ಬಹಳಷ್ಟು ಅಭಿವೃದ್ಧಿ ಕಾರ್ಯ ಮಾಡಿಸಿದ್ದೇನೆನ್ನುತ್ತಾರೆ ಅವರು.

ಆದರೂ ಈವರೆಗಿನ ಚಿತ್ರಣದಲ್ಲಿ ಈ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೇ ಮೇಲುಗೈ ಇರುವಂತೆ ಕಾಣುತ್ತಿದೆ.

ಒಟ್ಟಾರೆ ಈ ಆರೂ ಕ್ಷೇತ್ರಗಳಲ್ಲಿ ಸಮಬಲದ ಹಣಾಹಣಿ ಇರುವುದು ಮಾತ್ರ ಸತ್ಯ. ಅಷ್ಟೇ ಅಲ್ಲ, ಇಲ್ಲಿನ ಶಾಸಕರೇ ಜಿಲ್ಲಾ ಮಂತ್ರಿಗಳೂ ಆಗಿದ್ದುದರಿಂದ, ಇಲ್ಲಿನ ಸೋಲು-ಗೆಲುವು ಇಡೀ ಜಿಲ್ಲಾ ಜನತಾ ಪಕ್ಷಕ್ಕೇ ಬಹಳ ಪ್ರಮುಖ ವಿಷಯವಾಗಲಿದೆ.

ಉಚಿತ ಕಾನೂನು ನೆರವು ಶಿಬಿರ

ಕುದುರೆಗುಂಡಿ: ನರಸಿಂಹರಾಜಪುರದ ಉಚಿತ ಕಾನೂನು ನೆರವು ಸಮಿತಿಯ ಆಶ್ರಯದ ಕಾನೂನು ನೆರವು ಶಿಬಿರ ಇಲ್ಲಿ ಡಿ. 21ರಂದು ನಡೆಯಿತು. ಸಮಿತಿ ಕಾರ್ಯದರ್ಶಿ ಪಿ. ಆರ್. ಶ್ರೀನಿವಾಸಮೂರ್ತಿ ಸ್ವಾಗತಿಸುತ್ತಾ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಈ ಜಂಟಿ ಕಾರ್ಯಕ್ರಮದ ವಿವರಗಳನ್ನು ನೀಡಿ, ಮಹಿಳೆಯರು ಮತ್ತು ಪ. ಜಾತಿ/ಪ. ವರ್ಗಗಳವರಿಗೆ ಹಾಗೂ 8000 ರೂ.ಗಿಂತ ಕಡಿಮೆ ವಾರ್ಷಿಕ ಆದಾಯವಿರುವ ಎಲ್ಲರಿಗೆ ಈ ಸೌಲಭ್ಯ ದೊರೆಯುತ್ತದೆಂದರು. ಇದು ಈ ವರ್ಷ ಸಮಿತಿಯ 4ನೇ ಶಿಬಿರವೆಂದರು.

ಶಿಬಿರ ಉದ್ಘಾಟಿಸಿದ ವಕೀಲ ಸೀತೂರು ಚಂದ್ರಶೇಖರ್, ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳು ಸಾಕ್ಷಿಗಳು ಮುಂತಾದ ಎಲ್ಲ ಪರಿಕರಗಳಿದ್ದರೆ ಮಾತ್ರ, ಕಾನೂನಿನ ಚೌಕಟ್ಟಿನಲ್ಲಿ ನ್ಯಾಯ ದೊರಕಬಹುದು ಎಂದು ಸ್ಪಷ್ಟಪಡಿಸಿದರು. ಇನ್ನೊಬ್ಬರು ವಕೀಲರಾದ ಶಶಿಕಲಾ ಉರಣ್‌ಕರ್ ಮಾತನಾಡಿ ಕೋರ್ಟಿಗೆ ಪ್ರಕರಣ ಒಯ್ಯುವ ಮೊದಲು ಸಾಧ್ಯವಾದಷ್ಟೂ ರಾಜಿ ಮಾಡಿಕೊಳ್ಳಲು ಪ್ರಯತ್ನಿಸುವ ಅಗತ್ಯವನ್ನು ಒತ್ತಿಹೇಳಿ ಈ ಸಮಿತಿ ಸಂಧಾನಕ್ಕೆ ಕೂಡ ಪರಿಣಾಮಕಾರಿ ರೀತಿಯಲ್ಲಿ ನೆರವು ನೀಡುತ್ತದೆಂದರು.

ಅಧ್ಯಕ್ಷತೆ ವಹಿಸಿದ್ದ ಎಚ್.ಎಸ್. ರಾವ್ ರಾವ್, ಈ ಸಮಿತಿಯ ವಕೀಲರಿಗೆ ಯಾವ ಶುಲ್ಕವನ್ನೂ ಕೊಡಬೇಕಾಗಿಲ್ಲ, ನೆರವಿನ ಅಗತ್ಯವಿರುವವರೆಲ್ಲರೂ ಈ ಸೌಲಭ್ಯ ಪ್ರಯೋಜನ ಪಡೆದುಕೊಳ್ಳಬೇಕೆಂದರು.

ಶಿಬಿರದಲ್ಲಿ ಸುಮಾರು 10 ಪ್ರಕರಣಗಳಲ್ಲಿ ಉಚಿತ ಕಾನೂನು ಸಲಹೆ ನೀಡಲಾಯಿತು.

ಶೃಂಗೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 6 ಜಿಲ್ಲಾ ಪರಿಷತ್ ಸ್ಥಾನಗಳಿಗೆ

ಜನತಾ–ಕಾಂಗ್ರೆಸ್ ಸಮಬಲ ಹೋರಾಟ

ಪ್ರಜಾಪ್ರಭುತ್ವವೆಂಬುದು ಸ್ವಂತವಾಗಿ ಣ್ಣಿನಿಂದ ಹುಟ್ಟಿ ಅರಳಲೂ ಇಲ್ಲ, ನೆಲದಿಂದ ನೆಟ್ಟು ಬೇರು ಬಿಡಲೂ ಇಲ್ಲ. ...ಗಾಗಿ ಪ್ರಜಾತಂತ್ರೀಯ ಮೌಲ್ಯಗಳೆಂದ ...ನೆಂದೇ ಗೊತ್ತಿಲ್ಲದ ಈ ನಮ್ಮ ಕತ್ತಲ ...ದಿನದಲ್ಲಿ ಚುನಾವಣೆಯೊಂದೇ "ಪ್ರಜಾಪ್ರಭುತ್ವ"ದ ಏಕೈಕ ಲಕ್ಷಣವಾಗಿ ಬಿಟ್ಟಿದೆ. ಅದರಲ್ಲೂ 1983ರಿಂದೀಚೆಗಿನ 4 ವರ್ಷಗಳಲ್ಲಿ ಈ ಪ್ರಜಾಪ್ರಭುತ್ವದ 'ಆಚರಣೆ' ...ತ್ಯಂತ ಸ್ಥಿತಿಗೆ ಮುಟ್ಟಿದ್ದು ಈ ಅವಧಿಯಲ್ಲಿ ಈ ಪ್ರಜಾಪ್ರಭುತ್ವ 'ಮಾನ್ಯ' ...ರುತದಾರ ಬಡಬಗ್ಗನ ಕಾಲು ಬುಡಕ್ಕೆ ...ರುತ್ತಿರುವುದು ಇದು ನಾಲ್ಕನೇ ಬಾರಿ!

ಅಂತೂ ಪುನಃ ಚುನಾವಣೆ ಬಂದಿದೆ. ಜನಕ್ಕೆ ಬೇಕಿರಲಿ – ಬೇಡವಿರಲಿ; ಓಟು ಹಾಕಲೇಬೇಕಾದ ಕರ್ಮ. ಯಾರು ಗೆದ್ದರೇನು, ಬಡವರ ಅರಿಹೊಟ್ಟೆ ಮಾತ್ರ ಈ ದೇಶದ 'ಬಡತನದ ರೇಖೆ'ಯಂತೆ ತುಂಬಿ ಬರುವುದೆಂತಲೇ ಇಲ್ಲ ಎಂಬುದು ಸತ್ಯವಾದರೂ 'ಯಾರು ಗೆಲ್ಲಬಹುದು?' ಎಂಬ ಕುತೂಹಲದ ಪ್ರಶ್ನೆ ಮಾತ್ರ ಈ ಸೀಸನ್ನಿನ ಒಂದು ಸಾಂಕ್ರಾಮಿಕ ಜಾಡ್ಯ.

ಈ ಹಿನ್ನೆಲೆಯಲ್ಲಿ, 'ಶೃಂಗೇರಿ' ವಿಧಾನ ಸಭಾ ಕ್ಷೇತ್ರದ ಮೂರೂ ತಾಲ್ಲೂಕುಗಳ 6 ಜಿಲ್ಲಾ ಪರಿಷತ್ ಕ್ಷೇತ್ರಗಳ ಬಗೆಗೂ ಈ ಕುತೂಹಲದ ಪ್ರಶ್ನೆಗೆ ಉತ್ತರ ಹುಡುಕುವ ಪ್ರಯತ್ನ ಮಾಡಬೇಕಾಗಿದೆ.

ಚಿಕ್ಕಮಗಳೂರು ಜಿಲ್ಲಾ ಪರಿಷತ್ತಿಗೆ ಒಟ್ಟು 26 ಸ್ಥಾನಗಳಿದ್ದು, ಒಟ್ಟಾರೆ ಜಿಲ್ಲೆಯಲ್ಲಿ ಈಗಲೂ ಜನತಾ ಪಕ್ಷವೇ 'ಗೆಲ್ಲುವ ಕುದುರೆ' (ಫೇವರಿಟ್ಸ್) ಎಂಬುದು ಬಹುತೇಕ ಸಮೀಕ್ಷಕರ ಅಂದಾಜು. ಆದರೆ ಈ ಅಂದಾಜು ಶೃಂಗೇರಿ ಕ್ಷೇತ್ರದ 6 ಸ್ಥಾನಗಳಿಗೂ ಅನ್ವಯಿಸುವುದೇ ಎಂಬುದು ಸ್ವಲ್ಪ ತೊಡಕಿನ ಪ್ರಶ್ನೆಯೇ; ಏಕೆಂದರೆ ಕಳೆದ ಚುನಾವಣೆಯಲ್ಲಿಯೇ ಇಲ್ಲಿ ಜನತಾ ಪಕ್ಷ ಗೆದ್ದುದು ಕೇವಲ 83 ಮತಗಳ ಅಂತರದಿಂದ. ಅನಂತರದ ಈ ಎರಡು ವರ್ಷಗಳಲ್ಲಿ ಆ ಪಕ್ಷದ ಪ್ರತಿಷ್ಠೆ ಉಳಿಯುವಂಥ, ಬೆಳೆಯುವಂಥ ಕ್ರಿಯೆ ನಡೆದಿದೆಯೆ?

ಜನರನ್ನು ಮುಟ್ಟಿದ ಕಾರ್ಯಕ್ರಮಗಳು

ಜನತಾ ಸರ್ಕಾರದ ಕೆಲವು ಕಾರ್ಯಕ್ರಮಗಳು ಜನರನ್ನು ಮುಟ್ಟಿರುವುದರಲ್ಲಿ ಎರಡು ಮಾತಿಲ್ಲ. ಹಸಿರು ಕಾರ್ಡ್ ನೀಡಿಕೆ ಮಾತ್ರವಲ್ಲ, ಅದಕ್ಕೆ ಯಥೇಚ್ಛವಾಗಿ ಅಕ್ಕಿ ಈ 2–3 ವರ್ಷಗಳಲ್ಲಿ ಎಲ್ಲ ಕಡೆ ದೊರೆತಿದೆ, ಹೆಚ್ಚಾಗಿ ಒಳ್ಳೆಯ ಅಕ್ಕಿಯೇ ದೊರೆಕಿದೆ ಎನ್ನುವುದಾದರೆ, ಬಹುತೇಕ ಮಧ್ಯಮ ವರ್ಗದ ಜನ, ಹೆಚ್ಚಿನಂಶ ನೌಕರ ವರ್ಗ ಸಹ (ವಿಪರೀತ ಲಂಚ ತಿನ್ನದವರು) ಈ ಅಕ್ಕಿಯನ್ನೇ ನೆಚ್ಚಿಕೊಂಡಿದ್ದಾರೆ. ಕಾರ್ಡ್ ಹಂಚಿಕೆಯಲ್ಲಾಗಲಿ, ಅಕ್ಕಿ ವಿತರಣೆಯ ಬಗೆಗಾಗಲಿ ಅಲ್ಲಲ್ಲಿ, ಆಗೊಮ್ಮೆ ಈಗೊಮ್ಮೆ ದೂರುಗಳಿರಲಿಲ್ಲವೆಂದಲ್ಲ. ಆದರೆ ಸಾರ್ವತ್ರಿಕವಾಗಿ, ಈ ಹಿಂದಿಗೂ, ಈ ಸರ್ಕಾರದ ಕಾಲಕ್ಕೂ ಆಗಿರುವ ವ್ಯತ್ಯಾಸ ಜನರ ಮನಸ್ಸಿನಲ್ಲಿ ಅಚ್ಚೊತ್ತಿರುವುದು ಸ್ಪಷ್ಟ.

ಕೃಷಿ ಸಾಲಗಳ ಸುಸ್ತಿ ಬಡ್ಡಿ ಮನ್ನಾ ಮಾಡಿರುವುದಲ್ಲದೆ, ಸಕಾಲದಲ್ಲಿ ಮರುಪಾವತಿ ಮಾಡುವ ಎಲ್ಲ ಕೃಷಿ ಸಾಲಗಳಿಗೂ ಬಡ್ಡಿದರವನ್ನು ಖಾಯಂ ಆಗಿ ಶೇ. 7ಕ್ಕೆ ಇಳಿಸಿರುವುದರ ಫಲವನ್ನು ಇಡೀ ರೈತ ಸಮುದಾಯ ಪಡೆದಿದೆ, ಅದರ ಬೆಲೆಯನ್ನು ಅರ್ಥ ಮಾಡಿಕೊಂಡಿದೆ. ಈ ಎರಡು ವಿಚಾರಗಳಲ್ಲಿ ಜನತೆಯನ್ನು ಯಾರೂ ಮೋಸ ಪಡಿಸಲು ಸಾಧ್ಯವಿಲ್ಲ.

ಇನ್ನು ತಾಳಿಭಾಗ್ಯ, ವಿಧವೆಯರ, ವೃದ್ಧರ ಮಾಸಾಶನ ಹಾಗೂ ಬಾಣಂತಿಯರಿಗೆ ಹೆರಿಗೆ ಭತ್ಯದ ಯೋಜನೆಗಳು, ಕೆಲವು ಕಾಮಗಾರಿಗಳೂ ಸಹ ಸಾಕಷ್ಟು ಪ್ರಭಾವ ಬೀರಿವೆ.

(3ನೇ ಪುಟಕ್ಕೆ)

ಹೀಗೊಂದು ಸೇತುವೆ ....

ಮೇಗುಂದಾ ಹೋಬಳಿಯ ಗುಡ್ಡೇತೋಟ ಗ್ರಾಮದಲ್ಲಿ, ಗ್ರಾಮಸ್ಥರಿಂದ 'ಶೋಕಾ...ದಿ' ಎಂದು ಬಯ್ಯಿಸಿಕೊಳ್ಳುತ್ತ ಹರಿಯುವ ಸೀತಾನದಿ ಎಂಬ ಸಣ್ಣ ಹೊಳೆಯಿದೆ. (ಮುಂದೆ ಉದ್ದಕ್ಕೂ ಅದು ಹಾಗೇ ಬಯ್ಯಿಸಿಕೊಳ್ಳುತ್ತ ಬಂದು ನಾರ್ವೆ–ಬೆಳಗೊಳದ ಬಳಿ ತುಂಗೆಗೆ ಸೇರುತ್ತದೆ.)

ಗುಡ್ಡೇತೋಟದಲ್ಲಿ ಈ ಹೊಳೆಯ ಆಚೆ ಕಡೆಯಲ್ಲಿ ನೂರಾರು ಎಕರೆ ಜಮೀನು, ಕಾಫಿ ತೋಟ ಇತ್ಯಾದಿ ಇದ್ದು, ಅಲ್ಲಿನ ಕಾರ್ಮಿಕರ ವಸತಿಗಳು, ರೈತರ ಮನೆಗಳು, ಅಲ್ಲಿಂದ ಸ್ವಲ್ಪಮೇಲೆ ಇರುವ ಹುಲಿಗರಡಿ ಗ್ರಾಮಕ್ಕೆ ಸೇರಿದ ಕುಟುಂಬಗಳು ಮುಂತಾಗಿ ಸುಮಾರು 60ಕ್ಕೂ ಹೆಚ್ಚು ಕುಟುಂಬಗಳವರು ತಮ್ಮ ದೈನಂದಿನ ಪ್ರತಿಯೊಂದು ಅವಶ್ಯಕತೆಗೂ ಈ ಹೊಳೆ ದಾಟಿ ಗುಡ್ಡೇತೋಟಕ್ಕೇ ಬರಬೇಕು. ಹಾಗೇ ಶಾಲೆ ಮಕ್ಕಳು, ಜಮೀನುಗಳಲ್ಲಿ ದುಡಿಯಲು ಹೋಗುವ ಕಾರ್ಮಿಕರು ಮುಂತಾದವರೂ ಸಹ.

ಈ ಹೊಳೆಗೆ ಒಂದು ಸೇತುವೆಗಾಗಿ ಸುಮಾರು 17–18 ವರ್ಷಗಳಿಂದಲೂ ಬೇಡಿಕೆಯಿದ್ದು, ಒಮ್ಮೆ ಕಾಲು ಸೇತುವೆ ಮಂಜೂರು ಸಹ ಆಗಿತ್ತು. ಆದರೆ ಪಕ್ಕಾ 18 ಅಡಿ ಸೇತುವೆಯೇ ಆಗಬೇಕೆಂದು ಗ್ರಾಮಸ್ಥರೊಬ್ಬರು ತಕರಾರು ಎತ್ತಿದ ಕಾರಣ ಅದು ಸ್ಥಗಿತಗೊಂಡದ್ದು ಮತ್ತೆ ಚಾಲನೆ ಪಡೆಯಲೇ ಇಲ್ಲ.

ಈಗ ಸ್ಥಳೀಯ ಶ್ರೀಮಂತರಾದ ಅರಳಿಕಟ್ಟೆಯ ಎ.ಆರ್. ಲಕ್ಷ್ಮಣರಾಯರು ಈ ಹಳ್ಳಕ್ಕೊಂದು ಮರದ ಹಂಗಾಮಿ "ಸೇತುವೆ" ನಿರ್ಮಿಸಿದ್ದಾರೆ. ಆದರೆ ಮಳೆಗಾಲ ಬಂದಾಗ ಮಾತ್ರ ಅದರ ಪ್ರತಿಯೊಂದು ತುಂಡನ್ನೂ ಕಿತ್ತೀ ಹೊಳೆಗೆ ದಾರಿ ಬಿಟ್ಟುಕೊಡಬೇಕಾಗುತ್ತದೆ.

ನೀರನ್ನು ಸ್ವಲ್ಪ ತಗ್ಗಿನಲ್ಲಿ ಒಂದೇ ಕಡೆ ಹರಿಯುವಂತೆ ಮಾಡಿ, ಮರಳು ತುಂಬಿದ ಪ್ಲಾಸ್ಟಿಕ್ ಮೂಟೆಗಳ ಕುಂದಗಳನ್ನು 6 ಅಡಿಗೊಂದರಂತೆ 2 ಸಾಲು ಕಟ್ಟಿ ಅದರ ಮೇಲೆ ತೊಲೆಗಳನ್ನ ಹಾಕಿ, ಆರೂವರೆ ಅಡಿ ಉದ್ದ, 5 ಅಂಗುಲ ಅಗಲ, 2 ಅಂಗುಲ ದಪ್ಪದ ಸುಮಾರು 110 ಪಕಾಸಿಗಳನ್ನು ... ಅಂಗುಲಕ್ಕೊಂದರಂತೆ ಜೋಡಿಸಿ ಮೊಳೆ ...ರಿ ಈ ಸೇತುವೆಯ ಆಚೀಚೆ ...ನೀನ ಮರಳು. ಚೀಲದ ಕಟ್ಟೆ ಕಟ್ಟಿ ಮಧ್ಯೆ ಕಲ್ಲು ಮರಳು ತುಂಬಿ 'ರಸ್ತೆ' ನಿರ್ಮಿಸಿ ಸೇತುವೆಗೆ ಸಂಪರ್ಕ ಕಲ್ಪಿಸಿದ್ದಾರೆ.

ತಮ್ಮ ಕಾಫಿತೋಟದಿಂದ ಕಡಿದ ಹಳೇ ನಾಟವನ್ನು ಇದಕ್ಕಾಗಿ ಬಳಸಿದ್ದು, ಒಟ್ಟಿಗೆ ಸುಮಾರು 5 ಸಾವಿರ ರೂ.ವರೆಗೆ ಖರ್ಚಾಗಿದೆ. ಈ ಕೆಲಸಕ್ಕೆ ಸ್ಥಳೀಯ ಹರಿಜನ – ಗಿರಿಜನರು ಸಂಪೂರ್ಣ ಸಹಕಾರ ನೀಡಿರುವುದನ್ನೂ, ಕರ್ಕಿಕೊಂಡ ಎಸ್ಟೇಟಿನವರು ಸುಮಾರು 500 ರೂ. ಖರ್ಚು ಮಾಡಿ ಸಂಪರ್ಕ ರಸ್ತೆ ದುರಸ್ತಿ ಮಾಡಿರುವುದನ್ನೂ ಲಕ್ಷ್ಮಣರಾವ್ ಸ್ಮರಿಸುತ್ತಾರೆ.

ಈ ಪ್ರದೇಶದಿಂದ ಮುಂದಕ್ಕೆ ಹುಲಿಗರಡಿ ಗ್ರಾಮದಲ್ಲಿ ಸುಮಾರು 30–40 ಮಂದಿ ಹರಿಜನ – ಗಿರಿಜನರಿಗೆ ದರ್ಖಾಸ್ತ್ ನೀಡಲಾಗಿದ್ದು, ಅಲ್ಲಿಗೆ ಇದೇ ಮಾರ್ಗವಾಗಿ ಸಂಪರ್ಕ ಕಲ್ಪಿಸುವ ಬಗ್ಗೆ, ಇಲ್ಲಿನ ಸೇತುವೆಯೂ ಸೇರಿದಂತೆ ಸುಮಾರು 11 ಲಕ್ಷ ರೂ.ಗಳ ಪ್ರಸ್ತಾಪವೊಂದು ಸಮಗ್ರ ಗಿರಿಜನಾಭಿವೃದ್ಧಿ ಯೋಜನೆಯಡಿ ಮಂಜೂರಾತಿಗಾಗಿ ಸರ್ಕಾರಕ್ಕೆ ಹೋಗಿದ್ದು, ಹಣದ ಅಭಾವದಿಂದಾಗಿ ಮಂಜೂರಾಗಿಲ್ಲವೆನ್ನಲಾಗಿದೆ. ಈಗಲಾದರೂ ಸರ್ಕಾರ ಇಲ್ಲಿಗೆ ಒಂದು ಸೇತುವೆಯನ್ನು ತುರ್ತಾಗಿ ಮಂಜೂರು ಮಾಡಬೇಕೆಂದು ಸ್ಥಳೀಯರ ಒತ್ತಾಯವಾಗಿದೆ.

"ಸ್ವಾರ್ಥಿಗಳು ನಡೆಸುತ್ತಿರುವ ಈ ಚಾರಿತ್ರ್ಯವಧೆ ನಿಲ್ಲಲಿ"

ಪ್ರಿಯಓದುಗರು ಮತ್ತು ಸಾರ್ವಜನಿಕರಲ್ಲಿ;

ಅಸಗೋಡಿನ ಶ್ರೀ ಶಕ್ತಿ ಶಿಶು ಆಹಾರ ಉತ್ಪಾದನಾ ಕೇಂದ್ರವು 'ದ್ವಾಕ್ರಾ' ಯೋಜನೆಯಡಿ 1984ರ ಸೆಪ್ಟೆಂಬರಿನಲ್ಲಿ ಮಂಜೂರು ಮಾಡಲ್ಪಟ್ಟು, ಇದರಲ್ಲಿ ಈಗ ನಾವು 2 ತಂಡಗಳ ಒಟ್ಟು 24 ಜನ ಫಲಾನುಭವಿಗಳು ದುಡಿಯುತ್ತಿದ್ದು, ನಿಃಸಂಶಯವಾಗಿಯೂ ಸರ್ಕಾರದ ಈ ಯೋಜನೆಯ ಉದ್ದೇಶಿತ ಪ್ರಯೋಜನವನ್ನು ಪಡೆಯುತ್ತಿದ್ದೇವೆ.

ಈ ಘಟಕದ ಆರಂಭದಿಂದ ಹಿಡಿದು ಈವರೆಗಿನ ಬೆಳವಣಿಗೆಯ ಎಲ್ಲ ಹಂತಗಳಲ್ಲೂ ನಮಗೆ ಮಾರ್ಗದರ್ಶಕರಾಗಿ, ಸಹಾಯಕರಾಗಿ, ಬೆಂಬಲವಾಗಿ, ಎಲ್ಲ ಸಮಸ್ಯೆಗಳ ಪರಿಹಾರದಲ್ಲೂ ನಮ್ಮೊಂದಿಗೆ ಹೋರಾಡಿ, ಇಂದು ಈ ಘಟಕ ಇಷ್ಟೊಂದು ಜನಕ್ಕೆ ಒಂದು ಜೀವನಾಧಾರವಾಗುಳಿಯುವಂತೆ ಶ್ರಮಿಸಿದ ಏಕೈಕ ವ್ಯಕ್ತಿ ಶ್ರೀಮತಿ ಜಯಲಕ್ಷ್ಮಿ ವಾಸಪ್ಪಗೌಡ ಅವರು.

ಈ ಘಟಕದ ಫಲಾನುಭವಿಗಳಿಗೆ ಸಾಲ ಕೊಡಿಸಿ, ಘಟಕ ಪ್ರಾರಂಭಿಸಲು ಬೇಕಾದ ಪ್ರಾಥಮಿಕ ವ್ಯವಸ್ಥೆಗಳನ್ನು ಮಾಡಿಸಿಕೊಟ್ಟ ಅವರೇ, ಪೌಷ್ಟಿಕ ಆಹಾರ ತಯಾರಿಕೆಗೆ ಅಗತ್ಯವಾದ ತರಬೇತಿ ಕೊಡಿಸಲು ನಮ್ಮ ಒಂದು ತಂಡವನ್ನು ಮೈಸೂರಿನ ಕೇಂದ್ರ ಆಹಾರ ಸಂಶೋಧನಾಲಯಕ್ಕೆ (ಸಿಎಫ್‌ಟಿಆರ್‌ಐ) ಕರೆದೊಯ್ದು ನಮಗೆ ಮಾರ್ಗದರ್ಶನ ಕೊಡಿಸಿದರು.

ಈ ಕೈಗಾರಿಕೆಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದು ವಿಳಂಬವಾದಾಗ ನಾವು ಜಯಲಕ್ಷ್ಮಿಯವರ ನೇತೃತ್ವದಲ್ಲಿ ಕೊಪ್ಪ ವಿದ್ಯುಚ್ಛಕ್ತಿ ಮಂಡಳಿ ಕಚೇರಿಯೆದುರು ಧರಣಿ ನಡೆಸಿ ಯಶಸ್ವಿಯಾದೆವು.

ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸಿ, ವ್ಯವಹರಿಸಿ ಪೌಷ್ಟಿಕ ಆಹಾರಕ್ಕೆ ಬೆಲೆ ನಿಗದಿಪಡಿಸಿದ್ದಲ್ಲದೆ, ಕಡೂರು, ಮೂಡಿಗೆರೆ, ಕೊಪ್ಪ ತಾ||ಗಳ ಬಾಲವಿಕಾಸ ಯೋಜನೆಗಳವರು ಈ ಆಹಾರವನ್ನು ಖಾಯಂ ಆಗಿ ಕೊಳ್ಳುವ (ಮಾರುಕಟ್ಟೆ) ಏರ್ಪಾಡನ್ನೂ ಮಾಡಿದ್ದಾರೆ.

ಈ ಎಲ್ಲಾ ವ್ಯವಸ್ಥೆಗಳನ್ನು ಸ್ವತಃ ಮಾಡಿಕೊಳ್ಳುವಷ್ಟು ಸಾಮರ್ಥ್ಯ, ಅನುಭವ ನಮಗೆ ಇಲ್ಲದಿದ್ದಾಗ ಅವರು ಪ್ರತಿಯೊಂದು ರೀತಿಯಲ್ಲೂ ನಮಗೆ ನೀಡಿದ ಸಹಕಾರದಿಂದ ಮಾತ್ರ ನಾವು ಈ ಕೇಂದ್ರವನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲು ಸಾಧ್ಯವಾಯಿತು ಎಂಬುದು ಸತ್ಯ. ಆದುದರಿಂದ ಅವರನ್ನು ನಮ್ಮ ಸಮಿತಿಯ ಅಧ್ಯಕ್ಷಿಣಿಯಾಗಿ ನೇಮಿಸಿಕೊಂಡಿರುತ್ತೇವೆ. ಅವರು ಇದುವರೆಗೂ ನಮಗೆ ಸಾಕಷ್ಟು ಹಣ ಉಳಿಸಲು ಹಾಗೂ ನಮ್ಮ ಬ್ಯಾಂಕ್ ಸಾಲತೀರುವಲ್ಲಿ ದುಡಿಯಲು ಶ್ರಮಿಸಿದರೇ ವಿನಃ ನಮ್ಮಿಂದ ಯಾವರೀತಿಯ ಪ್ರತಿಫಲವನ್ನೂ ಅಪೇಕ್ಷಿಸದೇ ನಿಸ್ವಾರ್ಥವಾಗಿ ಸಹಕಾರ ನೀಡುತ್ತಾ ಬಂದಿದ್ದಾರೆ.

ಹಣಕಾಸಿನ ವಿಷಯದಲ್ಲೂ ಸಹ ಯಾವುದೇ ದುರುಪಯೋಗವಾಗಿಲ್ಲ. ಎರಡೂ ಗುಂಪಿನ ನಾಯಕಿಯರ ಹಾಗೂ ಅಧ್ಯಕ್ಷಿಣಿಯ ಹೆಸರುಗಳಲ್ಲಿರುವ 2 ಜಂಟಿ ಬ್ಯಾಂಕ್ ಖಾತೆಗಳ ಮೂಲಕ ವ್ಯವಹರಿಸುತ್ತಿದ್ದೇವೆ. ಪ್ರತಿ ತಿಂಗಳಿಗೊಂದಾವರ್ತಿ ನಾವೆಲ್ಲಾ ಸದಸ್ಯರೂ ಸಭೆ ಸೇರಿ ಆಯಾ ತಿಂಗಳ ಜಮಾ ಖರ್ಚನ್ನು ಪರಿಶೀಲಿಸುತ್ತೇವೆ. ಹಾಗೂ ಕೆಲಸ ಕಾರ್ಯಗಳ ಬಗ್ಗೆ ಗಮನವಿಟ್ಟಿರುತ್ತೇವೆ. ಪ್ರತಿಯೊಬ್ಬ ಸದಸ್ಯೆ ಕೆಲಸ ಮಾಡಿದ ಪ್ರತೀ ಒಂದು ದಿನಕ್ಕೆ 8 ರೂ.ಗಳನ್ನು ಅವರವರಿಗೂ 8 ರೂ.ಗಳನ್ನು ಅವರ ಬ್ಯಾಂಕ್ ಖಾತೆಗೂ ಸಂದಾಯ ಮಾಡುತ್ತೇವೆ. ಇದುವರೆಗೆ ನಮ್ಮ ಸಾಲದ ಕಂತು ಮುಕ್ಕಾಲು ಭಾಗ ಸಂದಿದ್ದು ಇನ್ನು ಕೆಲವೇ ತಿಂಗಳಲ್ಲಿ ಪೂರ್ತಿ ತೀರಿಸುವ ಭರವಸೆ ನಮಗಿದೆ.

ಈ ರೀತಿ ಪ್ರಗತಿಯ ಪಥದಲ್ಲಿ ನಡೆಯುತ್ತಿರುವ ಈ ಕೇಂದ್ರವನ್ನು ಗೌರವಿಸಲಾರದ ಕುತಂತ್ರಿಗಳು ತಮ್ಮ ಸ್ವಯುಕ್ತಿಕ ಕಾರಣಕ್ಕಾಗಿ ಶ್ರೀಮತಿ ಜಯಲಕ್ಷ್ಮಿಯವರ ಬಗ್ಗೆ, ಅವರ ಗೌರವಕ್ಕೆ ಧಕ್ಕೆಯುಂಟುಮಾಡುವ ರೀತಿಯಲ್ಲಿ ವರ್ತಿಸುತ್ತಿದ್ದಾರೆ. ಸಾರ್ವಜನಿಕವಾಗಿ ಅವರ ಚಾರಿತ್ರ್ಯವಧೆಗೂ ತೊಡಗಿದ್ದಾರೆ. ನಿಸ್ವಾರ್ಥದಿಂದ ಬಡ ಮಹಿಳೆಯರ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಇವರ ಸಹಕಾರ ಎಂದೆಂದೂ ನಮಗಿರಲೆಂದೂ ಅವರ ಬಗ್ಗೆ ಯಾರೂ ಸಂಶಯಪಡಬೇಕಾಗಿಲ್ಲವೆಂದೂ ದ್ವಾಕ್ರಾ ಪ್ರಯೋಜನದಾರರಾದ ನಾವುಗಳು ತಮ್ಮೆಲ್ಲರ ಗಮನಕ್ಕೆ ತರಲಿಚ್ಛಿಸುತ್ತೇವೆ.

– ಎಚ್.ಪಿ. ರೇವತಿ,
(ಮೊದಲನೆ ತಂಡದ ನಾಯಕಿ)
ಗಿರಿಜ,
(ಎರಡನೆ ತಂಡದ ನಾಯಕಿ)

ಜನತಾ—ಕಾಂಗ್ರೆಸ್ ಸಮಬಲ ಹೋರಾಟ

(2ನೇ ಪುಟದಿಂದ)

ಆದರೆ ಹೆಂಗೆ ಭತ್ಯದ ಮಂಜೂರಾತಿ ಮತ್ತು ವಿತರಣೆಗೆ ಮಾತ್ರ ಸಕಾಲದಲ್ಲಿ ಸಾಕಷ್ಟು ಹಣ ಒದಗಿಸದೆ ಎಲ್ಲ ಕಡೆಗಳಲ್ಲೂ ಪದೇ ಪದೇ ವಿಳಂಬವುಂಟಾಗಿ ಸಾಕಷ್ಟು ಅಸಮಾಧಾನವನ್ನೂ ಹಬ್ಬಿಸಿರುವ ಸಾಧ್ಯತೆಯಿದೆ.

ಇವಿಷ್ಟು ಮುಖ್ಯವಾಗಿ ಜನತಾ ಪಕ್ಷಕ್ಕೆ ಅಚ್ಚಳಿಯದ ಪ್ರಯೋಜನ ದೊರಕಿಸಿಕೊಟ್ಟದ್ದರೆ, ಅದಕ್ಕೆ ತೀವ್ರವಾದ ಆಘಾತವನ್ನು ಕೊಡಬಲ್ಲ ಅಂಶಗಳೂ ಇಲ್ಲದಿಲ್ಲ.

ಕಳಂಕಗಳು

ಅವುಗಳಲ್ಲಿ ಪ್ರಮುಖವಾದುದು ದರ್ಖಾಸ್ತಿನ ಪ್ರಶ್ನೆ. ಅಷ್ಟಿಷ್ಟು ಎಚ್ಚೆತ್ತಿರುವ ಬಡಜನರ ಬಹು ಮುಖ್ಯ ಬೇಡಿಕೆ—ಜಮೀನು. ಆದರೆ ಎರಡೆರಡು ಬಾರಿ ದರ್ಖಾಸ್ತು ಸಮಿತಿಗಳನ್ನು ರಚಿಸಿಯೂ ಈ ಸರ್ಕಾರ ಬಡವರಿಗೆ ಹಂಚಿರುವಭೂಮಿ ಸೊನ್ನೆಯಲ್ಲವಾದರೆ ಸೊನ್ನೆಗೆ ಅತಿ ಹತ್ತಿರ. ಆದರೆ ಗೋಮಾಳ, ಸೊಪ್ಪಿನಬೆಟ್ಟ, ಅರಣ್ಯ ಭೂಮಿ — ಮುಂತಾಗಿ, ಬಡವರ ವಿಚಾರದಲ್ಲಿ ಒಂದಾದ ಮೇಲೊಂದರಂತೆ ಅಡ್ಡಬರುವ ನಿಬಂಧನೆಗಳು ಶ್ರೀಮಂತರಿಗೆ, ಭೂಮಿಯುಳ್ಳವರಿಗೆ ಅಡ್ಡ ಬರುವುದಿಲ್ಲ. ಒತ್ತುವರಿಯೋ, ಅನಧಿಕೃತ ಸಾಗುವಳಿಯೋ, ಸುಳ್ಳು ರಿಕಾರ್ಡೋ ಅಂತೂ ಉಳ್ಳವರು ತಮಗಿಷ್ಟ ಬಂದ ಕಡೆ ಜಮೀನು ಮಾಡೇ ಮಾಡಿದ್ದಾರೆ, ಎಷ್ಟೋ ಕಡೆ ಅವು ಮಂಜೂರು ಕೂಡ ಆಗಿವೆ. ಬಡವರ ಹೊಟ್ಟೆಗೆ ಕಿಚ್ಚಿಡಲು ಇಷ್ಟೇ ಸಾಲದೆಂಬಂತೆ, ಇಂಥವರು ಎಷ್ಟೋ ಕಡೆ ಬಡವರು ದರ್ಖಾಸ್ತು ಕೇಳಿದ್ದ ಭೂಮಿಯನ್ನೋ, ಬಗರ್‌ಹುಕುಂ ಮಾಡಿಕೊಂಡಿದ್ದನ್ನೋ ಅಥವ ರೆಕಾರ್ಡ್ ಮಾಡಿಸಿಕೊಂಡಿದ್ದನ್ನೋ ಬಿಡದೆ ಕಬಳಿಸಿದ್ದಾರೆ. ಇಲ್ಲವೇ, ಬಡವರಿಗೆಂದು ಮೀಸಲಿಟ್ಟದ್ದ ಅಥವಾ "ಎ" ಲಿಸ್ಟಿಗೆ ತಂದಿದ್ದ ಭೂಮಿ ಇಂಥ ಯಾರಿಗೋ ಬೇಕಾದಾಗ ಅದಲು ಬದಲಾಗಿ ಶ್ರೀಮಂತರ ತೋಳ್ತೆಕ್ಕೆಗೆ ಸೇರಿಕೊಂಡು ಬಡವರನ್ನು ನೋಡಿ ಅಟ್ಟಹಾಸದಿಂದ ಅಣಕಿಸಿದೆ.

ಹೋಗಲಿ, ಇದಕ್ಕೆ ಮೊದಲೇ ಮಂಜೂರಾಗಿದ್ದ ಜಮೀನುಗಳಿಗಾದರೂ, ವ್ಯವಸ್ಥಿತವಾದ ಆಳತೆ-ಪಕ್ಕಾಪೋಡ್‌ಗಳಾಗಲಿ, ಇನ್ಯಾವುದೇ ಸೌಕರ್ಯವಾಗಲಿ ಆಗಲಿಲ್ಲ. ಕಾವಡಿ, ತಮ್ಮಡನಳ್ಳಿ ಮುಂತಾದ ಕಡೆ ಬೇಗಾನೆ ರಾಮಯ್ಯನವರ ಕಾಲದಲ್ಲಿ ಮಂಜೂರಾಗಿದ್ದ ಜಮೀನುಗಳು ಅನಂತರ ಆಗಬೇಕಿದ್ದ ಸೌಕರ್ಯಗಳಾಗದೆ ಅವರು ಬಿಟ್ಟು ಹೋದಲ್ಲೇ ಇವೆ. ಇನ್ನು ಬಗರ್‌ಹುಕುಂ ಸಾಗುವಳಿ ಮಾಡಿಕೊಂಡಿರುವವರಿಗಂತೂ ಆ ಭೂಮಿಗಳು ಅರಣ್ಯ ಅಥವಾ ಕಂದಾಯ ಇಲಾಖೆಯವರಿಂದ ಕಿರುಕುಳ ಅನುಭವಿಸುವುದಕ್ಕೆ ಮಾತ್ರ ಹೇತುವಾದವು ಈ ಬಗ್ಗೆ ಈ ಎಲ್ಲ ಬಡ ಜನ ಬೃಹತ್ ಪ್ರಮಾಣದಲ್ಲಿ ಚಳುವಳಿಗೆ ಇಳಿಯುವ ದಾರಿಯಲ್ಲಿ ಹಂತ ಹಂತವಾಗಿ ಸಿದ್ಧರಾಗುತ್ತಿದ್ದಾರೆ.

ಹೀಗೆ ಬಡ ಜನ ಜಮೀನಿಗಾಗಿ ಆಸೆಪಟ್ಟು ಕಣ್ಣು-ಬಾಯಿ ಬಿಟ್ಟುಕೊಂಡು ಕೂತಿದ್ದಾಗ ಅವರೆದುರೇ ಜಮೀನು 'ಮಾಡಿಕೊಳ್ಳುತ್ತ' ಹೋದವರಲ್ಲಿ ಜನತಾ ಪಕ್ಷದ ಮುಖಂಡರು ಅಥವಾ ಬೆಂಬಲಿಗರೂ ಸಹ ಸಾಕಷ್ಟು ಸಂಖ್ಯೆಯಲ್ಲಿರುವುದನ್ನು (ಅವರೇ ಹೆಚ್ಚು ಎಂದರೂ ತಪ್ಪಿಲ್ಲ) ಈ ಜನ ಗುರುತಿಸದೇ ಹೋಗಿಲ್ಲ. ಅದರಲ್ಲೂ ಪೇಟೆಗಳ ವ್ಯಾಪಾರಿಗಳು, ವಿವಿಧ ಉತ್ತಮ ಉದ್ಯೋಗಸ್ಥರು, ಮುಂತಾದವರು ಸಹ ಬಂದು ತಮ್ಮೆದುರೇ ಜಮೀನು ಮಾಡಿಕೊಂಡಾಗ! ಇವು ಜನತಾ ಪಾರ್ಟಿಗೆ ಬಹು ಮುಖ್ಯವಾಗಿ ಎರವಾಗಬಹುದಾದ ಸಂಗತಿಗಳು. ಇದಲ್ಲದೆ ಇತ್ತೀಚೆಗೆ ಬರಬರುತ್ತ, ಹಲವು ಕಡೆಗಳಲ್ಲಿ ಈಗಿನ ಜನತಾದವರೆಂದುಕೊಳ್ಳುವವರಿಗೂ ಹಿಂದಿನ ಕಾಂಗ್ರೆಸಿನವರಿಗೂ ವ್ಯತ್ಯಾಸವಿಲ್ಲವೆನ್ನುವಂತಾಗುತ್ತಿರುವುದೂ ಸಾಮಾನ್ಯ ಜನರಿಗೆ ಸಾಕಷ್ಟು ಭ್ರಮ ನಿರಸನ ಮಾಡಿದ್ದರೆ ಆಚ್ಚರಿಯಿಲ್ಲ.

ಜನತಾ ದೌರ್ಬಲ್ಯವೇ 'ಅಸ್ತ್ರ'

ಕಾಂಗ್ರೆಸಿಗೆ ಜನತಾದ ಈ ದೌರ್ಬಲ್ಯಗಳಿಂದ ಏನಾದರೂ ಪ್ರಯೋಜನವಾಗಬೇಕೇ ವಿನಃ ಅವರ ಸ್ವಂತ ವರ್ಚಸ್ಸಿನ ಹೆಚ್ಚಳ ಈ ಅವಧಿಯಲ್ಲಿ ಅಷ್ಟೇನೂ ಇಲ್ಲ. ಮತ್ತೂ ಕೇಳಿದರೆ, **ಜನತಾ ಪಕ್ಷಕ್ಕೆ ಕಳಂಕ ತರುವ ಪ್ರಯತ್ನದಲ್ಲಿ ಅಲ್ಲಲ್ಲಿ ಮತ್ತಷ್ಟು ಗೊಂದಲಗಳಿಗೋ ಅಶಾಂತಿಗೋ ತನ್ನದೂ ಒಂದು 'ಕೈ' ಯನ್ನು ಸೇರಿಸಿದ್ದಾರೆ. ಕೊಪ್ಪದ ಕಳೆದ ಒಂದೂವರೆ ವರ್ಷದ ವಿದ್ಯಮಾನವೇ ಇದಕ್ಕೆ ಉದಾಹರಣೆ ಸಾಕು.**

ಈ ಎರಡು ಪಕ್ಷಗಳಲ್ಲದೆ ಸಿ ಪಿ.ಐ. ಪಕ್ಷ ಕೂಡ ನರಸಿಂಹರಾಜಪುರ ಕಸಬಾ ಮತ್ತು ಕೊಪ್ಪ ಕಸಬಾ ಕ್ಷೇತ್ರಗಳಿಂದ ತನ್ನ ಸ್ಪರ್ಧಿಗಳನ್ನು ನಿಲ್ಲಿಸಿದೆ 1984ರ ಡಿಸೆಂಬರ್‌ನಲ್ಲಿ ನಡೆದ ಸಂಸತ್ ಚುನಾವಣೆಗಳಲ್ಲಷ್ಟೇ ಈ ಕ್ಷೇತ್ರದಲ್ಲಿ ಹೆಸರು ಕೇಳಿಬಂದ ಈ ಪಕ್ಷ ಇಲ್ಲಿ ಈಗಷ್ಟೇ ನೆಲೆಗೊಳ್ಳುತ್ತಿದ್ದು, ಈ ಚುನಾವಣೆ ಅದಕ್ಕೆ ಬಹುತೇಕ ಒಂದು ಪ್ರಚಾರ ಸಾಧನ ಮಾತ್ರ ಆಗಿರುವಂತಿದೆ.

ಈ ನಡುವೆ ಈ ಕ್ಷೇತ್ರದಲ್ಲಿ ಹೆಗಡೆ, ಆಸ್ಕರ್, ಪೂಜಾರಿ, ಡಿ.ಬಿ. ಚಂದ್ರೇಗೌಡ, ಬಿ. ಕೆ. ಸುಂದರೇಶ್ ವೀರಪ್ಪ ಮೊಯ್ಲಿ ಮತ್ತು ಎಂ ಎಸ್. ಕೃಷ್ಣನ್ ಚುನಾವಣಾ ಸಭೆಗಳನ್ನು ನಡೆಸಿದ್ದಾರೆ.

ಈಗ 6 ಕ್ಷೇತ್ರಗಳ ಬಗ್ಗೆ ಕೆಲ ವಿಶ್ಲೇಷಣೆಗಳು:

ಕೊಪ್ಪ ಕಸಬಾ

ಈ ಕ್ಷೇತ್ರದ ಶಾಸಕ, ಕಡೆಗೆ ಜಿಲ್ಲಾ ಮಂತ್ರಿ ಕೂಡ ಆಗಿದ್ದ ಗೋವಿಂದ ಗೌಡರ 'ಹೆಡ್ ಕ್ವಾರ್ಟರ್ಸ್' ಆದ ಇಲ್ಲಿ ಕೆ.ಎಸ್. ಕಾಡಪ್ಪ ಗೌಡ ಜನತಾ, ಬಿ. ಜಿ. ಚಿದಂಬರ್ ಕಾಂಗ್ರೆಸ್ ಮತ್ತು ಎನ್. ಆರ್. ರಾಮಚಂದ್ರ ಸಿ.ಪಿ.ಐ. ಅಭ್ಯರ್ಥಿಗಳು. ಸೀತಾರಾಂ ಎಂಬ ಪಕ್ಷೇತರರ ಹೆಸರೂ ಇದೆ.

ಗೋವಿಂದ ಗೌಡರ ಪಾಲಿಗೆ ಮಾತ್ರವಲ್ಲ, ಇಡೀ ಜನತಾ ಪಕ್ಷದ ಪಾಲಿಗೇ ಇದು ಅತಿ ಪ್ರತಿಷ್ಠೆಯ ಕ್ಷೇತ್ರ. ಆದರೆ ಅದರ ಅಭ್ಯರ್ಥಿ ತೀರ ಈಚಿನವರೆಗೂ ಕಾಂಗ್ರೆಸ್ಸಿನವರು. ಸ್ವತಃ ಚಿದಂಬರ್‌ರ 'ಗರಡಿ'ಯವರು. ಆದರೂ ಜನತಾದ ಕಾರ್ಯಕರ್ತರು ಒಮ್ಮನಸ್ಸಿನಿಂದ ಶ್ರಮಿಸುವುದು ಕಂಡುಬರುತ್ತಿದೆ.

ಆದ್ದೇ ಕಾಂಗ್ರೆಸ್ ಈಗಲೂ 'ಒಡೆದ ಮನೆ'ಯೇ ಎನ್ನಲಾಗಿದೆ. ಜಿಲ್ಲೆಯ ಅತಿ ಮುಖ್ಯರಲ್ಲೊಬ್ಬರಾದ ಡಯಾಸ್ ತಾವು ಬಹಿರಂಗ ಪ್ರಚಾರಕ್ಕೆ ಮಾತ್ರ ಬರುವುದಿಲ್ಲವೆಂದು ಹೇಳುವ ಮೂಲಕ ತಮ್ಮ ಅಸಮಾಧಾನವನ್ನು ಬಹಿರಂಗವಾಗಿಯೇ ವ್ಯಕ್ತಪಡಿಸಿದ್ದಾರೆನ್ನಲಾಗಿದೆ. ಅವರ ಕಡೆಯವರಿಗೆಲ್ಲ ಕಾಡಪ್ಪ ಗೌಡರ ಪರ ಕೆಲಸ ಮಾಡಲು ಹೇಳಿದ್ದಾರೆಂಬ ಬಲವಾದ ಸುದ್ದಿಯೂ ಇದೆ.

ಚಿದಂಬರ್ ವರ್ಚಸ್ಸು

ಆದರೂ ಸದ್ಯದ ಸ್ಥಿತಿಯಲ್ಲಿ ಚಿದಂಬರ್ ಒಬ್ಬರೇ ಒಂದು ಪಕ್ಷವೆಂಬಷ್ಟು ಅವರ ವರ್ಚಸ್ಸು ಇತ್ತು. (ಅವರಿಗೆ ಟಿಕೆಟ್ ಸಿಗದಿದ್ದರೆ ಸ್ವತಂತ್ರವಾಗಿ ನಿಲ್ಲುವುದೂ ಖಚಿತವಿತ್ತು.) ಈಗಲೂ ಅವರ ವರ್ಚಸ್ಸು ಅಷ್ಟೇನೂ ಮುಕ್ಕಾದಂತಿಲ್ಲ. ಇವರಿಗೆ ಅನುಕೂಲಕರವಾದ ಕೆಲವು ಎಸ್ಟೇಟ್ ಪ್ರದೇಶಗಳು, ಹಿಂದೆ ತಾ.ಅ.ಮಂ. ಸದಸ್ಯತ್ವದಿಂದಲೂ ಅವರನ್ನು ಬೆಂಬಲಿಸಿಕೊಂಡು ಬಂದ ಬೆಳವಿನಕೊಡಿಗೆ ಪಂಚಾಯ್ತಿಯಂಥ ಪ್ರದೇಶಗಳೂ ಇವೆ. ಅದೇ ರೀತಿ ಕಾಡಪ್ಪಗೌಡರಿಗೆ ನಾರ್ವೆ ಪಂಚಾಯ್ತಿಯಾದ್ಯಂತ. ಒಳ್ಳೆಯ ಬೆಂಬಲವಿದೆಯೆನ್ನಲಾಗುತ್ತಿದೆ. "ಚಿದಂಬರ್ ಒಳ್ಳೆಯ ಕೆಲಸಗಾರ. ಕ್ಷೇತ್ರಕ್ಕೆ ಯಾವ ಕೆಲಸವಾಗಬೇಕಾದರೂ ನುಗ್ಗಿ ಹೋಗಿ ಸಾಧಿಸಬಲ್ಲ" ಎಂಬ ಅಭಿಪ್ರಾಯ ಸಾಕಷ್ಟು ಬಲವಾಗಿದೆ.

ಒಟ್ಟಿನಲ್ಲಿ ಈ ಕ್ಷೇತ್ರ ತೀವ್ರ ಪೈಪೋಟಿಯಲ್ಲಿದೆ. ಯಾರು ಗೆದ್ದರೂ ಹತ್ತಿಪ್ಪತ್ತರಿಂದ ನೂರು-ನೂರೈವತ್ತು ಮತಗಳ ಅಂತರದೊಳಗೆ ಮಾತ್ರಎಂಬುದು ಬಹುತೇಕ ವೀಕ್ಷಕರ ಅಭಿಪ್ರಾಯ. ಆದರೆ 1985ರಲ್ಲಿ ಈ ಕ್ಷೇತ್ರದ ವ್ಯಾಪ್ತಿಯಲ್ಲಿ 1300ರಷ್ಟು ಮತಗಳು ಜನತಾಕ್ಕೆ ಕಮ್ಮಿ ಬಂದಿದ್ದುದನ್ನು ಕಡೆಗಣಿಸುವಂತಿಲ್ಲ. ಇಲ್ಲಿ 9459 ಗಂಡಸರು, 9058 ಮಹಿಳೆಯರು, ಒಟ್ಟು 18515 (?) ಮತದಾರರಿದ್ದಾರೆ.

ಶೃಂಗೇರಿ

ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿನ ಆರೂ ಸ್ಥಾನಗಳ ಪೈಕಿ ಬಹುಶಃ ಒಂದು ಅತಿ ವಿಶಿಷ್ಟವಾದ ಸ್ಪರ್ಧೆ ಈ ಕ್ಷೇತ್ರದಲ್ಲಿದೆ. ಕಾಂಗ್ರೆಸ್ ಅಭ್ಯರ್ಥಿ ಕೆ. ವಿ. ರಾಮಪ್ಪಯ್ಯ ಬ್ರಾಹ್ಮಣರೂ, ಜನತಾದ ಕೆ. ಎಂ ಶ್ರೀನಿವಾಸ್ ಒಕ್ಕಲಿಗರೂ ಆಗಿರುವುದು ಇದಕ್ಕೆ ಕಾರಣ. ಇಲ್ಲಿ ಕಾಂಗ್ರೆಸ್-ಜನತಾ ನೇರ ಸ್ಪರ್ಧೆಯಿದೆ.

ಈ ತಾಲ್ಲೂಕಿನಲ್ಲಿ ಸುಮಾರು 6ರಿಂದ 7 ಸಾವಿರ ಬ್ರಾಹ್ಮಣ, 1 ಸಾವಿರ ಮುಸ್ಲಿಂ, 3 ಸಾವಿರ ಹರಿಜನ, ಸುಮಾರು 8ರಿಂದ 9 ಸಾವಿರ ಒಕ್ಕಲಿಗ ಮತ್ತು ಇತರೆ ಜಾತಿ-ಜನಾಂಗದವರು ಒಟ್ಟು 21623 ಜನ ಮತದಾರರಿದ್ದಾರೆ. (ಹೆಂಗಸರು 11067, ಗಂಡಸರು 10556.)

ಮುಸುಕಿನ ಗುದ್ದಾಟ ಬಹಿರಂಗಕ್ಕೆ

ಈ ತಾಲ್ಲೂಕಿನಲ್ಲಿ ಬ್ರಾಹ್ಮಣರಿಗೂ ಒಕ್ಕಲಿಗರಿಗೂ ಮುಸುಕಿನ ಗುದ್ದಾಟ ಇರುವುದು ಗುಟ್ಟೇನಲ್ಲ. ಕಾಲೇಜು ಚುನಾವಣೆಗಳಿಂದ ಹಿಡಿದು ಎಲ್ಲ ರಂಗಗಳಲ್ಲೂ ಇದು ಹಾಸುಹೊಕ್ಕಾಗಿದೆ. ರಾಜಕೀಯ ಮತ್ತು ಅದಕ್ಕೆ ಸಂಬಂಧಪಟ್ಟ ಯಾವುದೇ ಸ್ಥಾನ ಮಾನಒಕ್ಕಲಿಗರಿಗೇ ದಕ್ಕುತ್ತಿದೆಯೆಂಬುದು ಬ್ರಾಹ್ಮಣ ಸಮುದಾಯದ ಸತತವಾದ ಕೂಗು. ಬಹುಶಃ ಇಂಥದೊಂದು ಬಲಾ ಬಲ ಪರೀಕ್ಷೆಗೆ ಬಹಳ ದಿನಗಳ ಸಿದ್ಧತೆ. ಈ ಬಾರಿ ಯಾವ ಪಕ್ಷವೂ ತಮ್ಮ ಅಭ್ಯರ್ಥಿಗೆ ಟಿಕೆಟ್ ಕೊಡದಿದ್ದರೆ ಸ್ವತಂತ್ರವಾಗಿ ಯಾದರೂ ನಿಲ್ಲಿಸಿ ಗೆಲ್ಲಿಸಬೇಕೆಂಬ ಒಡಂಬಡಿಕೆ, ಯಾವ ಪಕ್ಷವಾದರೂ ಟಿಕೆಟ್ ಕೊಟ್ಟಲ್ಲಿ ಪಕ್ಷ ಭೇದವೆಲ್ಲ ಬದಿಗಿಟ್ಟು ಗೆಲ್ಲಿಸುವ ಸಂಕಲ್ಪ ತಾ॥ ಬ್ರಾಹ್ಮಣ ಮಹಾ ಸಂಘದ್ದು. ಕಳೆದ ವರ್ಷ ತಾ॥ ಜನತಾ ಅಧ್ಯಕ್ಷ ಗಾದಿಯೇ ತಮಗೆ ದಕ್ಕಬೇಕೆಂಬುದು ಈ ಸಮುದಾಯದ ಪಟ್ಟಾಗಿತ್ತು. ತಾ॥ ಜನತಾ ಅಧ್ಯಕ್ಷಗಿರಿಯೂ ಆತನಿಗೇ, ಡಿ ಸಿ.ಸಿ ಬ್ಯಾಂಕ್ ಅಧ್ಯಕ್ಷನೂ ಆತನೇ, ಈಗ ಜಿ.ಪ. ಸದಸ್ಯತ್ವವೂ ಆತನಿಗೇ ಆಗ ವುದೆಂದರೇನು? ಎಂಬುದು ಅವರ ಆಕ್ರೋಶ.

"ಕಾರ್ಯ ಸಾಧ್ಯವಲ್ಲ"

ಆದರೆ ಇದಕ್ಕೆ ಒಕ್ಕಲಿಗ ಸಮುದಾಯ ದವರ ಅಥವಾ ಜನತಾ ಪಕ್ಷದ ಕೆಲ ಕಾರ್ಯಕರ್ತರ ಉತ್ತರವೂ ಇದೆ. ಬೇರೆ ತಾ॥ ಗಳಲ್ಲಾದರೆ ಬ್ರಾಹ್ಮಣರು ಕಾಂಗ್ರೆ ಜನತಾ ಮುಂತಾಗಿ ಎಲ್ಲ ಪಕ್ಷಗಳಲ್ಲೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಅದಕ್ಕೆ ಕಳೆದ ಸಲ ಕೊಪ್ಪ ತಾ॥ ಜನತಾ ಅಧ್ಯಕ್ಷ ಆನಂದರಾಮ ಭಟ್ಟರಿಗೆ ಯಾವ ವಿರೋಧ ವೂ ಇಲ್ಲದೆ ಸಿಕ್ಕಲಿಲ್ಲವೇನು? ಆದರೆ ಈ ತಾ॥ನಲ್ಲಿ ಬ್ರಾಹ್ಮಣರು ಹಿಂದಿನಿಂದಲೂ ಜನಸಂಘದವರು. ಕಾಂಗ್ರೆಸಿನಲ್ಲಿ ಕೂಡ ಎಲ್ಲೋ ಒಬ್ಬಿಬ್ಬರು ಇರುತ್ತಿದ್ದುದು. ಈ ಲೂ ಅಷ್ಟೆ. ಕಾಂಗ್ರೆಸ್, ಜನತಾ ಎರಡರಲ್ಲೂ ಇರುವುದು ಎಲ್ಲೋ ಒಬ್ಬಿಬ್ಬರು ಮಾತ್ರ ಆ ಸಮುದಾಯದವರ ಓಟು ಸಹ ಖಾತ್ರಿ ನೆಚ್ಚಿಕೆಯದಲ್ಲ. ಪಕ್ಷದ ಸಂಘಟನೆ, ಬೆ ವಣಿಗೆ, ಚುನಾವಣಾ ಸಿದ್ಧತೆ ಮುಂತಾ ಪೂರ್ತಿ ಕೆಲಸ ಬಹುತೇಕ ಒಕ್ಕಲಿಗರದು ಉಳಿದಂತೆ ಇತರೆ ಜನಾಂಗಗಳವರದು. ಹಾ ಗಿದ್ದೂ ಇವರ ಕೆಲಸಕ್ಕೆ ತಕ್ಕ ಪ್ರಾಮುಖ್ಯ ಸ್ಥಾನಗಳನ್ನು ಪಕ್ಷದವತಿಯಿಂದ ಅವಕಾ ವಿರುವಲ್ಲೆಲ್ಲ ನೀಡಲಾಗುತ್ತಿದೆ. ಇಂ ಪ್ರಮುಖ ಸ್ಥಾನಗಳೇ ಬೇಕೆಂದು ಅವ ಪಟ್ಟು ಹಿಡಿಯುವುದು ಕಾರ್ಯ ಸಾಧ ವಾದುದಲ್ಲ— ಇದು ಇವರ ವಾದ.

ಆದರೆ ಈ ಯಾವ ವಾದ-ವಿವಾದವ 'ಅಧಿಕೃತ'ದಲ್ಲಲ್ಲ. ಎಲ್ಲ ತೆರೆಯ ಮರೆಯೊ ಗೇ!

'ಹಳೇ ಹುಲಿ'

ಈ ಎಲ್ಲ ಕ್ಷುಲ್ಲಕ ವಿಚಾರಗಳನ್ನೂ ಬ ಗಿಟ್ಟು, ಈ ಇಬ್ಬರು ಅಭ್ಯರ್ಥಿಗಳ ಹಾಗ ಅವರ ಪಕ್ಷಗಳ ಬಲಾಬಲಗಳನ್ನು ಮುಖ ವಾಗಿ ಪರಿಗಣಿಸಿ ನೋಡಿದಾಗ ಇಲ್ಲೂ ವ್ರ ಸೆಣಸಾಟವಿದೆ. ರಾಮಪ್ಪಯ್ಯ ರಾ ಕೀಯದ 'ಹಳೇ ಹುಲಿ'. ಪುರಸಭೆ, ಭ ಅಡಮಾನ ಬ್ಯಾಂಕ್‌ಗಳ ಅಧ್ಯಕ್ಷ, ಶೃಂ ರಿ ಕಾಲೇಜಿನ ಸಂಸ್ಥಾಪಕ ಸಂಘದ ಕಾ ದರ್ಶಿ, ಲಯನ್ಸ್ ಕ್ಲಬ್ ಅಧ್ಯಕ್ಷ— ಹೀ ಹಲವು ಕ್ಷೇತ್ರಗಳಲ್ಲಿ ಕೆಲಸ ಮಾಡಿ, ಸುಮಾ ರು 20 ವರ್ಷಕ್ಕೂ ಹೆಚ್ಚು ಕಾಲ ರಾ

(ನಾಲ್ಕನೇ ಪುಟಕ್ಕೆ)

ಜನತಾ–ಕಾಂಗ್ರೆ ಸಮಬಲ ಹೋರಾಟ

(3ನೇ ಪುಟದಿಂದ)
ಕೀಯದಲ್ಲಿ ಪಳಗಿ, ರಾಜಕೀಯದ ಏಳು ಬೀಳುಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ರುಚಿ ಕಂಡವರು. ಕೆಲವಷ್ಟು ವರ್ಷಗಳಿಂದ ವಿಧಾನ ಸಭೆ ಟಿಕೆಟ್‌ಗಾಗಿ ಅರ್ಜಿ ಹಾಕಿ, ಕಳೆದ ಬಾರಿಯಂತೂ ಇನ್ನೇನು ಟಿಕೆಟ್ ಸಿಕ್ಕೇ ಬಿಟ್ಟಿತು ಎನ್ನುವ ಹಾಗೆ ಆಗಿ ಕೈ ತಪ್ಪಿತ್ತೆಂದು ಅವರ ಕೆಲ ಬೆಂಬಲಿಗರ ಹೇಳಿಕೆ.

ಈ ಬಾರಿ ಅವರಿಗೆ ಟಿಕೆಟ್ ಕೊಡಿಸಲು ಹರಿಹರಪುರ ಗುರುಗಳೇ ತಾರಾದೇವಿಗೆ ಫೋನ್ ಮಾಡಿದ್ದರಂತೆ ಎಂಬುದು ಆ ವಲಯದವರಿಂದ ಹಬ್ಬಿರುವ ಸುದ್ದಿಯಾದರೆ, "ಗುರುಗಳ ಹೆಸರನ್ನು ಎಳೆ ತಂದಿರುವುದು ಬ್ರಾಹ್ಮಣರ ಓಟು ಕೀಳಲು ಹೂಡಿರುವ ಕೀಳು ತಂತ್ರ" ಎಂಬುದು ಜನತಾದವರ ಹೇಳಿಕೆ. ಅಂತೂ ಶೃಂಗೇರಿ ತಾ॥ ಬ್ರಾಹ್ಮಣ ಸಂಘ ಮಾತ್ರ ಈ ಭಾರಿ ತನ್ನೆಲ್ಲ ಪ್ರಭಾವ–ಶಕ್ತಿ-ಸಂಪನ್ಮೂಲಗಳನ್ನೂ ಈ ಚುನಾವಣೆಗೆ ತೊಡಗಿಸಿರುವುದು ಸ್ಪಷ್ಟ.

"ಕೆಲಸವೇ ಶ್ರೀರಕ್ಷೆ"

ಇತ್ತ ಕಚ್ಚೋಡಿ ಶ್ರೀನಿವಾಸ್ ರಾಮಪ್ಪಯ್ಯನವರಷ್ಟು ಪಳಗಿದವರಲ್ಲದಿದ್ದರೂ ರಾಜಕೀಯಕ್ಕೆ ಹೊಸಬರೇನೂ ಅಲ್ಲ. ವೀರಪ್ಪ ಗೌಡರ ಹಾಗೂ ಡಿ. ಬಿ. ಚಂದ್ರೇಗೌಡರ ಶಿಷ್ಯನಾಗಿ ತಕ್ಕಮಟ್ಟಿಗೆ ಅನುಭವ ಹೊಂದಿ 1983ರಿಂದೀಚೆಗೆ ಜನತಾ ಪಕ್ಷದ ಚುರುಕಿನ–ಬಿರುಸಿನ ಮುಂದಾಳುವಾಗಿ ತಾಲ್ಲೂಕಿನಾದ್ಯಂತ ಓಡಾಡಿ, ಇಡೀ ತಾಲ್ಲೂಕಿನ ಎಲ್ಲ ಸಮಸ್ಯೆಗಳ ಅತಿ ನಿಕಟ ಪರಿಚಯವುಳ್ಳವರು. ಅಷ್ಟೇ ಮುಖ್ಯವಾಗಿ, ವಿಶೇಷವಾಗಿ ಯಾವುದೇ ಭ್ರಷ್ಟಾಚಾರದ ಆಪಾದನೆಗೆ ಒಳಗಾಗಿಲ್ಲದವರು.

ಇವರ ಧೈರ್ಯ ಪಕ್ಷದ ಸಾಧನೆಯ ಮೇಲೆ ನಿಂತಿದೆ. "ಈ ತಾಲ್ಲೂಕಿನಲ್ಲಿ ಹಿಂದೆ 30 ವರ್ಷಗಳಲ್ಲಿ ಆಗದ್ದನ್ನು ಮೂರು ವರ್ಷಗಳಲ್ಲಿ ಮಾಡಿದ್ದೇವೆ. ಎಂದೂ ಆಗಲಾರದೆಂಬಂಥ ಕೆಲಸಗಳನ್ನೂ ಮಾಡಿದ್ದೇವೆ. ಪ್ರತಿಯೊಂದು ಕಾಮಗಾರಿಯನ್ನೂ ಕಟ್ಟುನಿಟ್ಟಾಗಿ ಆದ್ಯತೆಯ ಮೇಲೆ ಮಾಡಿದ್ದೇವೆ. ಯಾವ ಪ್ರದೇಶವನ್ನೂ ಕಡೆಗಣಿಸಿಲ್ಲ, ಯಾವ ಪ್ರದೇಶಕ್ಕೂ ಪ್ರಭಾವ ತೋರಿಸಿಲ್ಲ. ಇಷ್ಟಿರುವಾಗ ಜನ ಸ್ವಲ್ಪವಾದರೂ ಯೋಚಿಸದೆ, ಬರೀ ಜಾತಿಯೊಂದನ್ನೇ ನೆಚ್ಚಿಕೊಂಡು ಇನ್ನೂ ಅದೇ ಕೂಪ ಮಂಡೂಕಗಳೇ ಆಗಿರುತ್ತಾರೆಂಬ ಅಪಮಾನಕರವಾದ ನಿಲುವು ತಳೆಯಲು ನಾನು ಸಿದ್ಧನಿಲ್ಲ. ಪ್ರಾಮಾಣಿಕವಾಗಿ ದುಡಿಯುತ್ತಿದ್ದೇವೆ. ಜನ ಗುರುತಿಸದೆ ಇರಲಾರರು" ಎನ್ನುತ್ತಾರೆ.

ಈ ಮಾತಿಗೆ ಸಾಕಷ್ಟು ಪುಷ್ಟಿಯೂ ಸಿಗುತ್ತದೆ. ಬ್ರಾಹ್ಮಣರೊಬ್ಬರು, "ಸೊಸೈಟಿ ಅಕ್ಕಿ ಸಿಕ್ಕದಿದ್ದಲ್ಲವಾದರೆ ನಮಗೆ ಉಣ್ಣಲು ಏನೂ ಇರಲಿಲ್ಲ" ಎಂದುದು ಇದಕ್ಕೊಂದು ನಿದರ್ಶನ. ಆದರೆ, ಎಲ್ಲ ಬ್ರಾಹ್ಮಣರೂ ಇದೇ ರೀತಿ ಯೋಚಿಸುತ್ತಿಲ್ಲ. " ಈ ಬಾರಿ ನಾವೂ ಸ್ವಲ್ಪ ವಿಮರ್ಶೆ ಮಾಡುವುದಿದೆ" ... ವರೂ ಇದ್ದಾರೆ. (ಅಂದರೆ ಸಂಘದವರು ಹೇಳಿದಂತೆ ಬ್ರಾಹ್ಮಣರಿಗೇ ಓಟು ಮಾಡಬೇಕಾಗಿದೆ ಎಂದರ್ಥ.)

ಸಹಬಾಳ್ವೆಗೆ ತಿಲಾಂಜಲಿ, ಸಂಶಯ-ಅಸಹನೆಗೆ ನಾಂದಿ

ಈ ಜಾತಿ ಕಚ್ಚಾಟ ಯಾವ ಮಟ್ಟ ಮುಟ್ಟುತ್ತದೆಂಬುದನ್ನು ಕಾದು ನೋಡಬೇಕು. ಪಕ್ಷದ ನೆಲೆಯಲ್ಲಿ ಅಥವಾ ವೈಯಕ್ತಿಕ ನೆಲೆಯಲ್ಲಿ ಎಷ್ಟೇ ಜಿದ್ದಿನಿಂದ ಹೋರಾಡಿದರೂ ಅದರ ಪರಿಣಾಮ ಬೇರೆ. ಆದರೆ, ಜಾತಿಯ ನೆಲೆಯಲ್ಲಿ ಒಂದು ಸಮುದಾಯ ಘಟ ಕಟ್ಟಿ ಕಣಕ್ಕಿಳಿದರೆ ಅದರ ಪರಿಣಾಮವೇ ಬೇರೆ. ಉಗ್ರ ಜಾತೀಯತೆಯ ಈ ವಿಷ ವಾತಾವರಣದೊಳಗೂ, ಜಾತಿಯ ಕಿತ್ತಾಟವನ್ನು ಕೈಬಿಟ್ಟು ಆದಷ್ಟೂ ಸಹಬಾಳ್ವೆಗೆ, ಹೊಂದಾಣಿಕೆಯ ಸಾಮೂಹಿಕ ಕಾರ್ಯಕ್ರಮಗಳಿಗೆ ಈ ಎರಡೂ ಜಾತಿಗಳ ಹಲಮಂದಿ ಯುವಕರು,ಹಿರಿಯರೂ ಸಹ ಈಚಿನ ವರ್ಷಗಳಲ್ಲಿ ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸುತ್ತಿದ್ದು, ಇದು ಎಲ್ಲಾ ಜಾತಿ–ಕೋಮು–ಮತಗಳನ್ನೂ ಒಳಗೊಳ್ಳುತ್ತ, ಅವರುಗಳ ಮೇಲೆ ಪ್ರಭಾವ ಬೀರುತ್ತ ನಿಧಾನವಾಗಿಯಾದರೂ ಬೇರು ಬಿಡುತ್ತಿರುವ ಶುಭ ಲಕ್ಷಣಗಳಿದ್ದವು. ಆದರೆ, ಕಟ್ಟಾ 'ಜಾತಿ ಶ್ರೇಷ್ಠತೆ'ಯಿಂದ ಹುಟ್ಟಿರುವ ಈಗಿನ ವಿದ್ಯಮಾನ ಈ ಎರಡು ಪ್ರಬಲ ಜಾತಿಗಳ ಅಮಾಯಕ ಸಾಮಾನ್ಯ ಜನರನ್ನು ಬರಲಿರುವ ಇನ್ನೂ ಹತ್ತಾರು ವರ್ಷಗಳವರೆಗೆ ಪರಸ್ಪರ ಅಪನಂಬಿಕೆ–ಅಸಹನೆಗಳಿಂದ ದೂರದೂರವಾಗಿಸುವುದು ಶತಸ್ಸಿದ್ಧ. ಹೀಗೆ ಸಹಬಾಳ್ವೆಯಿಂದ ದೂರ ಸರಿಯಬೇಕಾಗುವುದರ ಪ್ರತಿಕೂಲ ಪರಿಣಾಮ ಯಾರ ಮೇಲೆ ಹೆಚ್ಚಿಗೆ ಆದೀತೆಂಬುದನ್ನೂ ಸಹ ಇವರೆಲ್ಲ ತಣ್ಣನೆಯ ಮನಸ್ಸಿನಿಂದ ಯೋಚಿಸುವುದು ಉಚಿತ. (ಇದು ಕಚ್ಚೋಡಿ ಶ್ರೀನಿವಾಸ್ ಪರ ಪ್ರಚಾರವಲ್ಲ, ಪೊಳ್ಳು 'ಜಾತಿ ಶ್ರೇಷ್ಠತೆ'ಯ ಭಾವನೆಯನ್ನು ಪ್ರಚೋದಿಸುವುದರ ವಿರುದ್ಧ ಎಚ್ಚರಿಕೆಯ ಹಿತ ನುಡಿ.)

ಜಯಪುರ

ಇದು ಪರಿಶಿಷ್ಟರಿಗೆ ಮೀಸಲಾದ ಕ್ಷೇತ್ರ. ಇಲ್ಲಿ ಕಾಂಗ್ರೆ–ಜನತಾ ಮುಖಾಮುಖಿ. ಎಚ್.ಎಂ. ಮಾಸ್ತಿ ಕಾಂಗ್ರೆಗೆ, ಶೇಖರ್ ಜನತಾಕ್ಕೆ ಅಭ್ಯರ್ಥಿಗಳು. ಇಬ್ಬರೂ ರಾಜಕೀಯಕ್ಕೆ ಹೊಸಬರು. ಮಾಸ್ತಿ ಜಯಪುರ ಪಂ॥ ಸದಸ್ಯರಾಗಿದ್ದರು. ರೆವಿನ್ಯೂ ಇನ್‌ಸ್ಪೆಕ್ಟರ್ ಸಹಾಯಕರಾಗಿ ಹೋಬಳಿಯಲ್ಲಿ ಹೆಚ್ಚು ಪರಿಚಿತರು. ಆದರೆ ಜನಪ್ರಿಯತೆಯನ್ನೇನೂ ಗಳಿಸಿಲ್ಲ ಎನ್ನಲಾಗುತ್ತಿದೆ. ಆದ್ದರಿಂದ ಇಲ್ಲಿ ಏನಿದ್ದರೂ ಯಾವ ಪಾರ್ಟಿಗೆ ಸಹಾನುಭೂತಿ ಹೆಚ್ಚು ಎಂಬುದೊಂದೇ ಫಲಿತಾಂಶದ ಮಾನದಂಡವಾಗಲಿದೆ.

ತೋಟ ಕಾರ್ಮಿಕರು

ಈ ಹೋಬಳಿಯಲ್ಲಿ ತೋಟ ಕಾರ್ಮಿಕರ ಸಂಖ್ಯೆ ವಿಪುಲವಿದ್ದು, 'ಇಂಟಕ್'ನ (ಕಾಂಗ್ರೆ) ಮಣಿಯ ಕಾರ್ಮಿಕ ಸಂಘಕ್ಕೆ ಸದಸ್ಯಬಲ ಜಾಸ್ತಿ. ಇನ್ನೊಂದು ಗಣನೀಯ ಸದಸ್ಯ ಬಲದ ಸಂಘ ಆದಿಶೇಷನ್‌ದು ಇದೂ ಜನತಾ ಪರವೇನಲ್ಲ. ಸಿಪಿಐ ಕಾರ್ಮಿಕ ಸಂಘಕ್ಕೂ ಇಲ್ಲಿ ಸಾಕಷ್ಟು ಸದಸ್ಯ ಬಲವಿದೆ. ಆದರೆ ಆ ಪಕ್ಷ ಅಭ್ಯರ್ಥಿಯನ್ನು ನಿಲ್ಲಿಸಿಲ್ಲ. ಅವರ ಮತಗಳು ಸ್ವತಂತ್ರವಾಗಿ ಚಲಾವಣೆಯಾಗುವುದಿದ್ದ, ಕಾಂಗ್ರೆಗೆ ಹೆಚ್ಚು ನೆರವಾಗಬಹುದು. ಈ ನಿಟ್ಟಿನಲ್ಲಿ, ಬಡ ಜನರಿಗೆ, ಕಾರ್ಮಿಕರಿಗೆ ತಮ್ಮ ಸರ್ಕಾರದಿಂದ ಆಗಿರುವ ಉಪಯೋಗವೇ ತಮಗೆ ಮತ ಗಳಿಸಿಕೊಡುತ್ತದೆಂಬುದು ಜನತಾ ಪಕ್ಷದ ಆಸೆ.

'ಸಹಸ್ರ ಚಿತ್ತಾರ ಮುಸಿ ನುಂಗಿತು'

ಸಾಮಾನ್ಯ ಮತದಾರರು ಹಿಂದೆ ಹೆಚ್ಚಾಗಿ ಕಾಂಗ್ರೆಗೇ ಒಲಿದಿದ್ದವರಾದರೂ ಕಳೆದೆರಡು ಚುನಾವಣೆಗಳಲ್ಲಿ ಜನತಾ ಸಾಕಷ್ಟು ಆಳವಾಗಿ ಪ್ರಭಾವ ಬೀರಿ, ಮೇಲುಗೈಯನ್ನೇ ಪಡೆದಿತ್ತು. ಅನಂತರ ಆಗಿರುವ ಒಳ್ಳೆಯ ಕೆಲಸಗಳು, ಕಾಮಗಾರಿಗಳು ಕೆಲವೇ ಕೆಲವಾದರೂ ಅವನ್ನೂ ನುಂಗಿ ಹಾಕುವಂಥ ಎರಡು ಕಾಮಗಾರಿಗಳು ಜನತಾಕ್ಕೆ ಸಾಕಷ್ಟು ಆಘಾತ ಕೊಡುವ ಸಾಧ್ಯತೆಯಿದೆ. ಈಗ ಅಲ್ಲಿ ಯಾರನ್ನಾದರೂ "ನಿಮ್ಮ ಹೋಬಳಿಯಲ್ಲೂ ಸಾಕಷ್ಟು ಕೆಲಸ ಆಗಿದೆಯಲ್ರಿ?" ಎಂದು ಕೇಳಿದರೆ ತಟ್ಟನೆ ಉತ್ತರ ಬರುತ್ತದೆ— "ಏನ್ರೀ ಮಾಡಿದ್ದಾರೆ? ಕೊಗ್ರೆ ರಾಮೇಗೌಡರ ಮನೆಗೆ ಒಂದು ಸೇತುವೆ, ಹೇರೂರು ಪುಟ್ಟಪ್ಪಹೆಗ್ಡೆಯವರ ಮನೆಗೊಂದು ಸೇತುವೆ, ಇಷ್ಟೇ ತಾನೆ?" ಕಟ್ಟುನಿಟ್ಟಾಗಿ ಆದ್ಯತೆಯ ಮೇರೆಗೇ ಕಾಮಗಾರಿಗಳು ಮಂಜೂರಾಗುವುದಿದ್ದಲ್ಲಿ ಈ ಎರಡು ಕೆಲಸಗಳೂ ಆದ್ಯತೆಯ ಪಟ್ಟಿಗೇ ಬರುತ್ತಿರಲಿಲ್ಲ ಎಂಬುದನ್ನು ಜನತಾ ಪಕ್ಷದವರೇ ಒಪ್ಪಿಕೊಳ್ಳುತ್ತಾರೆ.

ಇಷ್ಟರ ಮೇಲೆ ಇನ್ನು 'ಜನತಾ ಅಲೆ'ಯೇನಾದರೂ ಇದ್ದರೆ ಅದು ಅಥವಾ ಕಾಂಗ್ರೆ ಅಭ್ಯರ್ಥಿಯ ದೌರ್ಬಲ್ಯ – ಅನರ್ಹತೆಗಳೇನಾದರೂ ಇದ್ದರೆ ಅವು ಇಲ್ಲಿ ಜನತಾ ನೆರವಿಗೆ ಬಂದರೆ ಬರಬೇಕು! ಇಲ್ಲಿ ಮತದಾರರ ಸಂಖ್ಯೆ 16503 (8543+7860)


ಪತ್ರ

"ಶಾಮೀಲಾಗಿಲ್ಲ"

ಮಾನ್ಯರೆ,

ತಾ॥ 30.11.86ರ ನಿಮ್ಮ ಪತ್ರಿಕೆಯ 'ಗಾರ್ಡ್‌ನಿಂದ ಸುಲಿಗೆ' ಎಂಬ ವರದಿಯಲ್ಲಿ ತಿಳಿಸಲಾಗಿರುವಂತೆ ನಾನು ಸದರಿ ಗಾರ್ಡ್‌ನ ಜೊತೆ ಯಾವ ರೀತಿಯಲ್ಲೂ ಶಾಮೀಲೂ ಆಗಿಲ್ಲ, ಮಧ್ಯಸ್ಥಿಕೆಯನ್ನೂ ಮಾಡಿಲ್ಲ ಎಂದು ಈ ಮೂಲಕ ಸ್ಪಷ್ಟಪಡಿಸುತ್ತೇನೆ.

—ಸುಧಾಕರ, ಹೊನಗೋಡು



ಕೊಪ್ಪ ಕಸಬಾ ಕ್ಷೇತ್ರದ ಅಭ್ಯರ್ಥಿ

ಭಾರತ ಕಮ್ಯುನಿಸ್ಟ್ ಪಕ್ಷದ

ಎಚ್. ಆರ್. ರಾಮಚಂದ್ರ

ಇವರ ಕಿರುಪರಿಚಯ

ಮಧ್ಯಮ ವರ್ಗದ ರೈತ ಕುಟುಂಬದಿಂದ ಬಂದವರು. 1977ರಿಂದ 1980ರವರೆಗೆ ಕುದುರೆ ಮುಖದಲ್ಲಿ ಲೋಕೋಪಯೋಗಿ ಇಲಾಖೆ ಉದ್ಯೋಗಿ. ಕಾರ್ಮಿಕರ ಸಂಘಟನೆಯಿಂದಾಗಿ ಕೆಲಸ ನಷ್ಟ. ನಂತರ ಅಲ್ಲೇ ಒಂದು ವರ್ಷ ಸಂಘಟನೆಯ ಕೆಲಸ. ಕಮ್ಯುನಿಸ್ಟ್ ಪಕ್ಷದ ಸದಸ್ಯ–ಪೂರ್ಣಾವಧಿ ಕಾರ್ಯಕರ್ತ. 1980–81ರಲ್ಲಿ ಚಿಕ್ಕಮಗಳೂರು ಜಿಲ್ಲಾ ಲೋಕೋಪಯೋಗಿ ಕೆಲಸಗಾರರ ಸಂಘದ ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಎಸ್ಟೇಟ್, ಹೋಟೆಲ್ ಮತ್ತು ಇತರ ಕೆಲಸಗಾರರ ಸಂಘದ (ಎ.ಐ.ಟಿ.ಯು.ಸಿ.) ಕಾರ್ಯದರ್ಶಿ, 83–84ರಲ್ಲಿ ಕಮ್ಯುನಿಸ್ಟ್ ಪಕ್ಷದ ಕೊಪ್ಪ ತಾಲ್ಲೂಕು ಘಟಕದ ಕಾರ್ಯದರ್ಶಿಯಾಗಿ ಇಡೀ ಶೃಂಗೇರಿ ಕ್ಷೇತ್ರದಲ್ಲಿ ಪಕ್ಷದ ಮತ್ತು ಕಾರ್ಮಿಕರ, ರೈತರ ಸಂಘಟನೆ.

ಈಗ ಚಿಕ್ಕಮಗಳೂರು ಜಿಲ್ಲಾ ಲೋಕೋಪಯೋಗಿ ಕೆಲಸಗಾರರ ಸಂಘದ ಕಾರ್ಯದರ್ಶಿ, ಅಂಗನವಾಡಿ ಉದ್ಯೋಗಿಗಳ ಸಂಘದ ಕಾರ್ಯದರ್ಶಿ, ಸಮುದಾಯ ಆರೋಗ್ಯ ಮಾರ್ಗದರ್ಶಿಗಳ ಸಂಘ, ಕೊಪ್ಪ ತಾ॥ ಘಟಕದ ಪ್ರಧಾನ ಕಾರ್ಯದರ್ಶಿ, ಯುನೈಟೆಡ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ನಿನ ಉಪಾಧ್ಯಕ್ಷ, ಚಿಕ್ಕಮಗಳೂರು ಜಿಲ್ಲಾ ರೈತಸಂಘದ (ಎ.ಐ.ಕೆ.ಎಸ್.) ಉಪಾಧ್ಯಕ್ಷ, ಎ.ಐ.ಟಿ.ಯು.ಸಿ. ಕರ್ನಾಟಕ ರಾಜ್ಯದ ಜನರಲ್ ಕೌನ್ಸಿಲ್ ಸದಸ್ಯ.

ಇದಲ್ಲದೆ, ಕೊಪ್ಪದ ಶಂಕರ್ ಕಂಪೆನಿಯ ಕಾರ್ಮಿಕರಿಗೆ ಒಂದೆಡೆಯಿಂದ ಬಿ.ಎಂ.ಎಸ್. ನಾಯಕತ್ವವೂ ಇನ್ನೊಂದೆಡೆಯಿಂದ ಜನತಾ ಪಕ್ಷದವರ ನೇತೃತ್ವದ ಚಮಚಾ ಸಂಘದವರೂ ದ್ರೋಹ ಬಗೆದಾಗ, ಆತ್ಮ ಗೌರವದ ಈ ಶ್ರಮ ಜೀವಿಗಳಿಗೆ ಬೆಂಬಲವಾಗಿ ನಿಂತು ಅವರ ಹಕ್ಕುಗಳ ರಕ್ಷಣೆಗಾಗಿ ಶ್ರಮಿಸುತ್ತಿದ್ದಾರೆ.

ಹೀಗೆ, ಸಮರಶೀಲ ಹೋರಾಟಗಾರರಾಗಿದ್ದೂ, ಮೃದು ಮತ್ತು ಸರಳ ಸ್ವಭಾವದವರಾದ ನಮ್ಮ ಈ ಕಾಮ್ರೇಡ್ ದೀನ–ದುರ್ಬಲರೊಂದಿಗೆ, ಜನ ಸಾಮಾನ್ಯರೊಂದಿಗೆ ಬೆರೆತು ಅವರ ಕಷ್ಟ ಸುಖಗಳಲ್ಲಿ ಪಾಲ್ಗೊಳ್ಳುವವರು. ಕೇವಲ ಪಕ್ಷದ ಗೌರವ-ಧನದಿಂದಲೇ ದುಡಿಯುತ್ತಿರುವರು. ಭ್ರಷ್ಟಾಚಾರ, ಹಣದಾಹದಂಥ ಧೂರ್ತ ಸ್ವಭಾವಗಳು ಇವರ ಹತ್ತಿರ ಕೂಡ ಸುಳಿಯುವುದಿಲ್ಲ

'ತೆಂಡುಗೋಲು – ತೆನೆ'ಗೆ ನಿಮ್ಮ ಮತ

ಹೋರಾಟಕ್ಕೊಂದು ಸಹಮತ

ಇಂತು,
ಭಾರತ ಕಮ್ಯುನಿಸ್ಟ್ ಪಕ್ಷ
ಕೊಪ್ಪ ತಾಲ್ಲೂಕು ಘಟಕ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು: ದೀಪಟಿಗೆ ಅಚ್ಚುಕೂಟ, ಕೊಪ್ಪ